# ಅಖಿಲ ಭಾರತ ಪತ್ರಿಕೆ

**ಸಂಪಾದಕರು, ಧಾರವಾಡ**
ಡಾ॥ ಕೆ.ಎಸ್. ಆಮೂರ,
ಎಂ.ಎಸ್ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ – 580 007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಅಧ್ಯಕ್ಷರು, ಶ್ರೀ ಅರವಿಂದೋ ಸೊಸೈಟಿ
ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು–560078.
ಫೋನ್ : 080 – 2244 9882
http://abp.sirinudi.org

## ಪರಿವಿಡಿ

"ನಿಜವಾದ ನೇತಾರನಾಗುವುದು"

**ಅನು : ಡಾ. ಕೆ.ಎಸ್. ಆಮೂರ**
ಆಮಂತ್ರಣ (ಕವಿತೆ) 3
ನಿಜವಾದ ನೇತಾರ ಮನುಷ್ಯನ ಅಂತರಂಗದಲ್ಲಿದ್ದಾನೆ 4
ಯಾವಾಗಲೂ ಹೆಚ್ಚು ಒಳ್ಳೆಯವರಾಗುವುದು, ಮುಂದೆ ಸಾಗುವುದು 6
ಉದಾಹರಣೆಯಾಗಿರಿ 7
ನಿಜವಾದ ನೇತಾರನಾಗುವುದಕ್ಕೆ ನಿಬಂಧನೆಗಳು 9
ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದು 14
ಏನಾಗಬೇಕಾಗಿದೆ ಎಂಬುದನ್ನು ಕುರಿತು ಶ್ರೀಮಾತೆಯವರ ಬಯಕೆ 17
**ಅನು : ಶ್ರೀ ವೀರೇಂದ್ರ ಸಿಂಪಿ**
ಸಂಯೋಜನೆಯ ರೀತಿ ಮತ್ತು ಶ್ರೇಣಿ ವ್ಯವಸ್ಥೆ 18
**ಅನು : ಶ್ರೀ ಪುರುಷೋತ್ತಮ ಗಲಗಲಿ**
ಬಾಹ್ಯ ಹಾಗೂ ಆಂತರಿಕ ಶಿಸ್ತುಪಾಲನೆ ಹಾಗೂ ಸಂಘಟನೆ 22
ಮಾನವೀಯ ಸಂಬಂಧಗಳು 24
**ಅನು : ಡಾ. ಕೆ.ಎಸ್. ಆಮೂರ**
ಸರಿಯಾದ ಮನೋಭಾವ 27
ಬಲವುಳ್ಳ ಸತ್ತೆ ಯಾವಾಗಲೂ ಅಚಂಚಲವಾಗಿರುತ್ತದೆ 30
ಸಮಗ್ರ ನಂಬಿಕೆ ಮತ್ತು ಭಗ್ನವಾಗದ ತಾಳ್ಮೆ 33
ಬಲ–ಅವಶ್ಯವಾದ ಒಂದು ವಿಷಯ 34
ನಾಲ್ಕುಪಟ್ಟು ವ್ಯಕ್ತಿವಿಶಿಷ್ಟತೆಯಿಂದ ಕೂಡಿದ ಪೂರ್ಣತೆ 37
ಜೀವನದಿಂದ ಹಿಂಜರಿಯದಿರು (ಕವಿತೆ) 40
ಭವಿಷ್ಯತ್ತಿಗೆ ಹೆಚ್ಚು ಸಹಾಯಕರಾಗುವ ವ್ಯಕ್ತಿಗಳು 41
ಶಿವಾಜಿ – ಜಯಸಿಂಹ (ಮೃತಾತ್ಮರ ನಡುವಿನ ಸಂಭಾಷಣೆ) 42
**ವಾರ್ತಾಪತ್ರ** 46

**ಬೆಲೆ : 15/–**

# "ನಿಜವಾದ ನೇತಾರನಾಗುವುದು"

ತನ್ನ ಮಹತ್ವದ ಕಾರ್ಯವ ಮಾಡಲೆನಗೆ ದೇವ ಆದೇಶವಿತ್ತಿಹನು
ಪಾರ್ಥಿವ ಪರಿಣಾಮವನು, ಅಪಾಯವನು ಲೆಕ್ಕಿಸದೆ
ನನ್ನನಿಲ್ಲಿಗೆ ಕಳುಹಿಸಿದ ಅವನ ಸಂಕಲ್ಪವನು ಈಡೇರಿಸುವೆ ಚಿಂತಿಸದೆ.
ಪಾಪ–ಪುಣ್ಯ ಕುರಿತು ತರ್ಕ ಮಾಡದೆ ಇರುವೆ
ಆದರವನು ನನ್ನ ಹೃದಯದಲಿರಿಸಿದ ಕಾರ್ಯವನು ಕೈಕೊಳ್ಳುವೆ

**– ಶ್ರೀ ಅರವಿಂದರು**

(5/595)
ಮಿಂಚಿನ ಬಲಿಷ್ಠ ಮಗನೊಬ್ಬ ಭೂತಲದ ಮೇಲೆ ಉತ್ಸಾಹದ ತೀವ್ರಗತಿಯ
ಭವ್ಯ ಹೆಜ್ಜೆಗಳೊಡನೆ ಕೆಳಗಿಳಿದು ಬಂದ

ಗರ್ಭವೊಂದರಲಿ ದಿವ್ಯ ಪ್ರಕಾಶ ಜನಿಸಿತು, ಗುಡುಗಿನ ಶಕ್ತಿ ಮಾನವ
ಚೌಕಟ್ಟನೊಂದನು ತುಂಬಿತು.

ಸ್ವರ್ಗದ ಸ್ಥಿರ ವೇಗ, ಮಾಧುರ್ಯದ ಭವ್ಯತೆ, ಪರಿಶುದ್ಧ ಭಾವೋನ್ಮತ್ತತೆ
ರೆಕ್ಕೆ ಪಡೆದ ಸಾಮರ್ಥ್ಯ ಇವೆಲ್ಲ ಕೆಳಗಿಳಿದು ಬಂದಿಹವು.

ಮರ್ತ್ಯ ದೇಹವೊಂದರಲಿ ದೇವತೆಗಳೆಲ್ಲ ನೆಲೆಸಿಹರು
ಒಂದೇ ಹೆಸರನವರು ಇರಿಸಿಕೊಂಡಿಹರು

## ಆಮಂತ್ರಣ

(5/93)
ಗಾಳಿ ಹವಾಮಾನಗಳು ನನ್ನನ್ನು ಸುತ್ತುವರಿದು ತಟ್ಟುತಿರುವಾಗ
ಸಾಗುವೆನು ನಾ ಬೆಟ್ಟ ಕುರುಚಲು ಪ್ರದೇಶವಿರುವಲ್ಲಿಗೆ
ಯಾರು ಬರುವರು ನನ್ನೊಡನೆ, ಯಾರು ಮೇಲೇರುವರು ನನ್ನೊಡನೆ,
ಹಳ್ಳಕೊಳ್ಳಗಳ ದಾಟುವರಾರು? ಹಿಮವನ್ನು ಮೆಟ್ಟಿ ನಡೆಯುವವರಾರು?

ನಿಮ್ಮ ಬಾಗಿಲುಗಳ ಹಾಗೂ ಗೋಡೆಗಳ ಬಂಧನವಿರುವ
ನಗರಗಳ ಸಣ್ಣ ವೃತ್ತದಲಿ ನಾ ವಾಸಿಸಲಾರೆ
ನನ್ನ ಮೇಲಿರುವ ಅಂತರಿಕ್ಷದಲಿ ದೇವ ನೀಲವರ್ಣದವನಾಗಿರುವ
ನನಗೆದುರಾಗಿ ಬಂಡಾಯವೇಳುತಿವೆ ಗಾಳಿ, ಬಿರುಗಾಳಿಗಳು.

ಆಟವಾಡುವೆ ನನ್ನ ಈ ವಾಸಸ್ಥಳಗಳಲಿ ಏಕಾಂತದೊಡನೆ
ಅನಿರೀಕ್ಷಿತ ಅಪಾಯದ ಸ್ಥಳಗಳೆನ್ನನು ತಮ್ಮ ಸಖನನ್ನಾಗಿರಿಸಿಕೊಂಡಿಹವು
ಇಲ್ಲಿ ಗಾಳಿಗೂಡಿಸಿದ ಮಲೆನಾಡಿನಲಿ ಏರಿ ಹೋಗುವರಾರು?
ಬಹುಕಾಲ ಬದುಕುವರಾರು? ಮುಕ್ತರಾಗಿ ಜೀವಿಸುವರಾರು?

ಚಂಡ ಮಾರುತದ, ಪರ್ವತದ ಪ್ರಭುವು ನಾನು
ಸ್ವಾತಂತ್ರ್ಯ, ಸ್ವಾಭಿಮಾನಗಳ ಚೇತನವು ನಾನು
ನನ್ನ ರಾಜ್ಯದಲಿ ಭಾಗಿಯಾಗುವವನು, ನನ್ನೊಡನೆ ನಡೆವವನು
ಧೀರನಾಗಿರಬೇಕು, ಅಪಾಯದ ನೆಂಟನಾಗಿರಬೇಕು.

**–ಶ್ರೀ ಅರವಿಂದರು**

1908ರ ಸಮಯದಲ್ಲಿ ಅಲಿಪುರ ಜೇಲಿನಲ್ಲಿ ಬರೆದ ಕವಿತೆ.



## ನಿಜವಾದ ನೇತಾರ ಮನುಷ್ಯನ ಅಂತರಂಗದಲ್ಲಿದ್ದಾನೆ

(12/30) ಪ್ರತಿಯೊಬ್ಬ ಮಾನವ ತನ್ನ ಅಂತರಂಗದಲ್ಲಿ ಅಡಗಿರುವ ಶ್ರೇಷ್ಠತರ ಪ್ರಜ್ಞೆಯ ಬಗ್ಗೆ ಅರಿವುಳ್ಳವನಾಗುವ ಸಾಧ್ಯತೆಯನ್ನು ಕೊಂಡೊಯ್ಯುತ್ತಾನೆ, ಆ ಶ್ರೇಷ್ಠತರ ಪ್ರಜ್ಞೆ ಸದ್ಯದ ಜೀವನದ ಬಂಧನಗಳಾಚೆ ಸಾಗಿ ಹೋಗುತ್ತದೆ ಮತ್ತು ಅವನು ಉಚ್ಚತರ ಹಾಗೂ ವಿಶಾಲವಾದ ಜೀವನದಲ್ಲಿ ಪಾಲುಗೊಳ್ಳುವಂತೆ ಮಾಡುತ್ತದೆ. ನಿಜವಾಗಿ, ಅಪರೂಪದವರೆನಿಸುವ ಎಲ್ಲ ಸತ್ತೆಗಳಲ್ಲಿ ಯಾವಾಗಲೂ ಈ ಪ್ರಜ್ಞೆಯೇ ಅವರ ಜೀವನವನ್ನು ಆಳುತ್ತದೆ ಮತ್ತು ಅವರ ಅಸ್ತಿತ್ವದ ಪರಿಸ್ಥಿತಿಗಳನ್ನು, ಆ ಪರಿಸ್ಥಿತಿಗಳಿಗೆ ಅವರ ವ್ಯಕ್ತಿಗತ ಪ್ರತಿಕ್ರಿಯೆಯನ್ನು ಸಂಘಟಿಸು–ತ್ತದೆ. ಯಾವುದನ್ನು ಮಾನವ ಪ್ರಜ್ಞೆ ತಿಳಿದುಕೊಂಡಿರುವುದಿಲ್ಲವೋ, ಮತ್ತು ಅದಕ್ಕೆ ಏನು ಮಾಡಲು ಸಾಧ್ಯವಿರುವುದಿಲ್ಲವೋ ಅಂತಹದನ್ನು ಈ ಪ್ರಜ್ಞೆ ಅರಿತುಕೊಳ್ಳುತ್ತದೆ ಹಾಗೂ ಕೈಕೊಳ್ಳುತ್ತದೆ, ಅದು ಸತ್ತೆಯ ಕೇಂದ್ರದಲ್ಲಿ ಪ್ರಕಾಶಿಸುವ ಜ್ಯೋತಿಯ ಹಾಗಿರುತ್ತದೆ, ಅದರ ಬೆಳಕು ಬಾಹ್ಯ ಪ್ರಜ್ಞೆಯ ದಟ್ಟವಾದ ಆವರಣಗಳಲ್ಲಿ ಹಾಯ್ದು ಹೊರಸೂಸುತ್ತದೆ.

**– ಶ್ರೀಮಾತೆ**

*

(1/664) ನೇತಾರ ನಿಮ್ಮೊಳಗೇ ಇದ್ದಾನೆ. ನೀವು ಅವನನ್ನು ಕಂಡುಹಿಡಿದು ಅವನ ಧ್ವನಿಯನ್ನು ಕೇಳಬಲ್ಲಿರಾದರೆ ಆಗ ಜನರು ನಿಮಗೆ ಕಿವಿಗೊಡದೆ ಇರಲಾರರು ಎಂಬುದನ್ನು ಕಂಡುಕೊಳ್ಳುವಿರಿ. ಏಕೆಂದರೆ ಜನರ ಅಂತರಂಗದಲ್ಲಿ ಒಂದು ಧ್ವನಿಯಿರುತ್ತದೆ, ಅದೇ ಸ್ವತಃ ಕೇಳಿಸಿಕೊಳ್ಳುವಂತೆ ಮಾಡುತ್ತದೆ. ಆ ಧ್ವನಿ ಮತ್ತು ಆ ಬಲ ನಿಮ್ಮೊಳಗಿದೆ. ನೀವು ಅದನ್ನು ನಿಮ್ಮ ಅಂತರಂಗದಲ್ಲಿ ಕಂಡುಕೊಂಡರೆ, ಅದರ ಸಾನ್ನಿಧ್ಯದಲ್ಲಿ ಜೀವಿಸಿದರೆ, ಅದು ನೀವೇ ಆಗಿಬಿಟ್ಟರೆ, ಆಗ ನಿಮ್ಮಿಂದ ಹೊರ–ಹೊರಟ ಒಂದು ಶಬ್ದ ಇತರರಲ್ಲಿ ಉತ್ತರ ನೀಡುವ ಧ್ವನಿಯನ್ನು ಎಚ್ಚರಗೊಳಿಸು–ತ್ತದೆ ಎಂಬುದನ್ನು ಕಂಡುಕೊಳ್ಳುವಿರಿ.

**–ಶ್ರೀ ಅರವಿಂದರು**

*

(13/340) ಶ್ರೇಷ್ಠ ಚಿಂತಕ, ನಾಯಕ, ಜನರ ನೇತಾರ, ಶ್ರೇಷ್ಠ ಗುರು, ಋಷಿ, ಪ್ರವಾದಿ, ಧರ್ಮ ಸಂಸ್ಥಾಪಕ, ಸಂತ, ಮಾನವ ಪ್ರೇಮಿ, ಶ್ರೇಷ್ಠ ಕಲಾವಿದ, ಶ್ರೇಷ್ಠ

ಕವಿ, ಶ್ರೇಷ್ಠ ವಿಜ್ಞಾನಿ, ವಿರಾಗಿ ಹಾಗೂ ತನ್ನನ್ನೇ ಪಳಗಿಸಿಕೊಳ್ಳುವವ, ವಸ್ತು–ವಿಷಯಗಳು, ಘಟನೆಗಳು ಮತ್ತು ಶಕ್ತಿಗಳನ್ನು ಸಾಧುಗೊಳಿಸುವವ ಇವರೆಲ್ಲರಲ್ಲಿ ದೇವನೇ ಸ್ವತಃ ತನ್ನನ್ನು ಪ್ರಕಟಿಸುತ್ತಾನೆ. ಕಾರ್ಯವೇ ಸ್ವತಃ ಉಚ್ಚಮಟ್ಟದ ಕಾವ್ಯ, ಸೌಂದರ್ಯದ ಪರಿಪೂರ್ಣ ರೂಪ, ಆಳವಾದ ಪ್ರೇಮ, ಉದಾರ ಕರ್ಮ, ದೈವೀ ಸಿದ್ಧಿ ದೇವನ ಒಂದು ಚಲನೆ, ಅದು ಪ್ರಕಟಣೆಯಲ್ಲಿರುವ ಭಗವಂತ.

**–ಶ್ರೀ ಅರವಿಂದರು**

*

(25/40) ದೈವೀ ಸತ್ಯಕ್ಕೆ ಸ್ಪಂದಿಸುವ ಆತ್ಮವನ್ನು ಅನುಸರಿಸು, ತೋರಿಕೆಗಳತ್ತ ನೆಗೆತ ಮಾಡುವ ಮನಸ್ಸನ್ನಲ್ಲ. ದೈವೀ ಸಾಮರ್ಥ್ಯವನ್ನು ನಂಬು, ಅದು ನಿನ್ನಲ್ಲಿರುವ ದೈವಿಕ ಅಂಶಗಳನ್ನು ಮುಕ್ತಗೊಳಿಸುವುದು ಮತ್ತು ಎಲ್ಲವೂ ದೈವೀ (ಪರಾ) ಪ್ರಕೃತಿಯ ದೈವೀ ಅಭಿವ್ಯಕ್ತಿಯಾಗುವಂತೆ ರೂಪಿಸುವುದು.

**–ಶ್ರೀ ಅರವಿಂದರು**

*

(16/418–19) ನೀವು ಬಯಸುವುದನ್ನು ಆಚೆಗೆ ಸರಿಸಬೇಕು, ಭಗವಂತ ಏನನ್ನು ಬಯಸುತ್ತಾನೆ ಎಂಬುದನ್ನು ತಿಳಿದುಕೊಳ್ಳಲು ಇಚ್ಛೆ ಪಡಬೇಕು. ನಿಮ್ಮ ಹೃದಯ ನಿಮ್ಮ ಭಾವೋದ್ರೇಕಗಳು ಇಲ್ಲವೆ ರೂಢಿಗತ ಅಭಿಪ್ರಾಯಗಳು ಸರಿಯಾಗಿರುವುದು ಮತ್ತು ಆವಶ್ಯಕ ಎಂದು ಅವುಗಳನ್ನು ಗಟ್ಟಿಯಾಗಿ ಹಿಡಿದುಕೊಳ್ಳುವುದರಲ್ಲಿ ವಿಶ್ವಾಸವಿರಿಸದಿರಿ, ಅವುಗಳಾಚೆ ಸಾಗಿ ಹೋಗಿ ಗೀತೆಯಲ್ಲಿನ ಅರ್ಜುನನಂತೆ ಭಗವಂತ, ಸರಿ ಮತ್ತು ಆವಶ್ಯಕ ಎಂದು ವಿಧಿಸಿದ್ದನ್ನು ತಿಳಿದುಕೊಳ್ಳುವುದನ್ನು ಮಾತ್ರ ಅರಸಿರಿ. 'ಕರ್ತವ್ಯಂ ಕರ್ಮ' ಎಂದರೆ ಮಾಡಬೇಕಾದುದನ್ನು ನೆರವೇರಿಸಿದಾಗ ಸರಿ ಮತ್ತು ಅವಶ್ಯ–ವಾಗಿರುವುದು ಅನಿವಾರ್ಯವೆಂಬಂತೆ ಸಂಭವಿಸುತ್ತದೆ ಎಂಬ ನಂಬಿಕೆಯನ್ನು ದೃಢವಾಗಿ ಇಟ್ಟುಕೊಳ್ಳಿರಿ, ಹಾಗೆ ಸಂಭವಿಸಿದ್ದು ನೀವು ನಿರೀಕ್ಷಿಸಿದ್ದ ಇಲ್ಲವೆ ಆದ್ಯತೆ ನೀಡಿದ್ದ ಪರಿಣಾಮವಾಗಿರದೆ ಇರಬಹುದು. ಜಗತ್ತನ್ನು ಆಳುವ ಸಾಮರ್ಥ್ಯದಲ್ಲಿ ಕನಿಷ್ಠಪಕ್ಷ ನಿಮ್ಮಲ್ಲಿರುವಷ್ಟು ಬುದ್ಧಿವಂತಿಕೆ ಇದ್ದೇ ಇರುತ್ತದೆ ಮತ್ತು ಅದರ ನಿರ್ವಹಣೆಯಲ್ಲಿ ಆ ಸಾಮರ್ಥ್ಯ ನಿಮ್ಮ ಸಲಹೆ ಕೇಳಬೇಕೆಂಬುದು ಇಲ್ಲವೆ ನಿಮ್ಮಲ್ಲಿ ಲೋಲವಾಗಬೇಕೆಂಬುದು ಎಳ್ಳಷ್ಟೂ ಅವಶ್ಯವಾಗಿರುವುದಿಲ್ಲ. ಭಗವಂತ ಅದರ ನಿರ್ವಹಣೆ ಮಾಡುತ್ತಾನೆ.

**–ಶ್ರೀ ಅರವಿಂದರು**

*



(25/9) ದೈವೀ ಕಾರ್ಯಕ್ಕಾಗಿ, ದೈವೀ ಪ್ರಕಟಣೆಯಲ್ಲಿ ಸಹಾಯ ಮಾಡುವುದಕ್ಕಾಗಿ ನಿನಗೆ ಜೀವನವನ್ನು ಕೊಡಲಾಗಿದೆ ಎಂದು ಭಾವಿಸು. ದೈವೀ ಪ್ರಜ್ಞೆಯ ಪರಿಶುದ್ಧತೆ, ಶಕ್ತಿ, ಪ್ರಕಾಶ, ವಿಸ್ತಾರ, ಸ್ಥಿರತೆ ಮತ್ತು ಆನಂದ ಇವುಗಳನ್ನಲ್ಲದೆ ಬೇರೇನನ್ನೂ ಬಯಸಬೇಡ, ಆ ಪ್ರಜ್ಞೆ ನಿನ್ನ ಮನಸ್ಸು, ಪ್ರಾಣ ಹಾಗೂ ದೇಹಗಳಲ್ಲಿ ಪರಿವರ್ತನೆ ಉಂಟಾಗುವಂತೆ ಒತ್ತಾಯ ತರಲಿ ಎಂದು ಬಯಸು.

**–ಶ್ರೀ ಅರವಿಂದರು**

*

(3/442) ಕೇವಲ ಭಕ್ತಿ ಬುದ್ಧಿವಂತ ಮನುಷ್ಯನನ್ನು ಕುಳ್ಳನನ್ನಾಗಿ ಮಾಡುತ್ತದೆ, ಕೇವಲ ಜ್ಞಾನ ಭಗವಂತನ ನಾಟಕದಲ್ಲಿ ಅವನನ್ನು ಅಪರಿಪೂರ್ಣ ನಟನನ್ನಾಗಿ ಮಾಡುತ್ತದೆ. ಕೇವಲ ಶರಣಾಗತರಾಗಿರುವವರ ಮನಸ್ಸುಗಳಲ್ಲಿ ಭಗವಂತ ಭಕ್ತಿಯನ್ನೂ, ಜ್ಞಾನವನ್ನೂ ಸುರಿಯುತ್ತಾನೆ, ಇವೆರಡೂ ಪ್ರಬಲ ಕ್ರಿಯೆಗೆ ಜೊತೆ–ಜೊತೆಯಾಗಿ ಆಧಾರ ಒದಗಿಸುತ್ತವೆ.

**–ಶ್ರೀ ಅರವಿಂದರು**

*

## ಯಾವಾಗಲೂ ಹೆಚ್ಚು ಒಳ್ಳೆಯವರಾಗುವುದು, ಮುಂದೆ ಸಾಗುವುದು

(16/428) ಮೊದಲ ನಿಬಂಧನೆಯೆಂದರೆ ವೈಯಕ್ತಿಕ ಒಲವನ್ನು ಗುರಿಯಾಗಿ ಮಾಡಿಕೊಳ್ಳದೆ ಇರುವುದು.

ಅವಶ್ಯವಾಗಿ ಇರಬೇಕಾದ ಮೊದಲ ಗುಣಲಕ್ಷಣಗಳೆಂದರೆ ದಿಟ್ಟತನ, ಧೈರ್ಯ ಮತ್ತು ಪಟ್ಟು ಹಿಡಿಯುವಿಕೆ.

ನಂತರ ಮನುಷ್ಯ ಅರಿವಿಗೆ ತಂದುಕೊಳ್ಳಬೇಕಾದ ವಿಷಯಗಳೆಂದರೆ ತಾನು ತಿಳಿದುಕೊಳ್ಳಬೇಕಾದುದಕ್ಕೆ ಹೋಲಿಸಿದರೆ ತಾನೇನನ್ನೂ ತಿಳಿದಿಲ್ಲ, ತಾನು ಮಾಡ–ಬೇಕಾದುದಕ್ಕೆ ಹೋಲಿಸಿದರೆ ತಾನೇನನ್ನೂ ಮಾಡಲಾರ ಮತ್ತು ತಾನೇನಾಗ–ಬೇಕಾಗಿದೆಯೋ ಅದಕ್ಕೆ ಹೋಲಿಸಿದರೆ ತಾನೇನೂ ಆಗಿಲ್ಲ ಎಂಬುದು.

ಮನುಷ್ಯ ತನ್ನ ಸ್ವಭಾವದಲ್ಲಿ ಕೊರತೆ ಇದೆ ಎಂದು ತೋರಿಬಂದುದನ್ನು ಪಡೆಯುವುದಕ್ಕೆ, ತಾನಿನ್ನೂ ತಿಳಿದುಕೊಂಡಿರದೆ ಇದ್ದುದನ್ನು ತಿಳಿದುಕೊಳ್ಳುವುದಕ್ಕೆ, ತಾನು ಈವರೆಗೆ ಕೈಕೊಳ್ಳಲು ಶಕ್ಯವಾಗದೆ ಇದ್ದುದನ್ನು ಕೈಕೊಳ್ಳಲು ಶಕ್ತನಾಗಲು ಅವನಲ್ಲಿ ವ್ಯತ್ಯಾಸಕ್ಕೊಳಗಾಗದ ಸಂಕಲ್ಪವನ್ನು ಇಟ್ಟುಕೊಳ್ಳಬೇಕೆಂಬುದು.

ವೈಯಕ್ತಿಕ ಆಸೆಗಳು ಇಲ್ಲದೆ ಇರುವಾಗ ದೊರಕುವ ಪ್ರಕಾಶ ಮತ್ತು ಶಾಂತಿ ಇವುಗಳೊಂದಿಗೆ ಮನುಷ್ಯ ಸತತ ಪ್ರಗತಿ ಸಾಧಿಸಬೇಕೆಂಬುದು.

ಮನುಷ್ಯ ಇರಿಸಿಕೊಳ್ಳಬೇಕಾದ ಕಾರ್ಯಕ್ರಮ: "ಯಾವಾಗಲೂ ಹೆಚ್ಚು ಒಳ್ಳೆಯವನಾಗುವುದು, ಪ್ರಗತಿ ಸಾಧಿಸುವುದು."

ಮತ್ತು ಭಗವಂತನನ್ನು ಪ್ರಕಟಿಸುವುದರ ಸಲುವಾಗಿ ಅವನನ್ನು ಅರಿತು–ಕೊಳ್ಳುವ ಏಕೈಕ ಗುರಿಯನ್ನು ಇರಿಸಿಕೊಂಡಿರಬೇಕೆಂಬುದು.

ಪಟ್ಟು ಹಿಡಿಯಿರಿ, ಇಂದು ನೀವು ಮಾಡಲಾಗದೆ ಇದ್ದುದನ್ನು ನಾಳೆ ಮಾಡಲು ಶಕ್ತರಾಗುವಿರಿ.

**–ಶ್ರೀಮಾತೆ**

*

(29/449)

ಚಲಿಸುವ ಗಳಿಗೆಯನು ಸಂಧಿಸುವುದವನ ಅಚಲ ಸಂಕಲ್ಪ
ಬಾಗಿಸವು ಅವನ ವಿಜಯೀ ಶಿರವ ಜಗತ್ತಿನ ಬಡಿತಗಳು,
ಸ್ಥಿರ ಖಚಿತವಾಗಿರುವವು ಅವನ ಹೆಜ್ಜೆಗಳು ಬೆಳೆಯುವ ರಾತ್ರಿಯಲಿ
ಹಿಮ್ಮೆಟ್ಟುವುದು ಅವನ ಗುರಿ ಅವಸರಿಸಿ ಹೆಜ್ಜೆಗಳನವನು ಇರಿಸದಿಹನು
ರಾತ್ರಿಯ ಉಚ್ಚ ದನಿಗಳತ್ತವನು ಹೊರಳದಿಹನು.
ಕೀಳು ದೇವತೆಗಳ ಸಹಾಯವನವನು ಯಾಚಿಸದಿಹನು
ನೆಟ್ಟಿರುವವನ ಕಣ್ಣುಗಳು ಬದಲಾಗದ ಗುರಿಯ ಮೇಲೆ.

**–ಶ್ರೀ ಅರವಿಂದರು**

*

## ಉದಾಹರಣೆಯಾಗಿರಿ

(17/337) ಪ್ರತಿಯೊಬ್ಬನೂ ತನಗೆ ತಾನೇ ಜವಾಬ್ದಾರನಾಗಿರುತ್ತಾನೆ. ನೀವು ಇತರರಿಗೆ ಸಹಾಯ ಮಾಡಲು ಅಭೀಪ್ಸೆಪಟ್ಟರೆ ಮನುಷ್ಯ ಏನಾಗಿರಬೇಕೋ ಅದರ ಉದಾಹರಣೆಯನ್ನು ಕೊಡುವುದರ ಮೂಲಕ ಅತ್ಯಂತ ಹೆಚ್ಚು ಪರಿಣಾಮ–ಕಾರಿಯಾಗಿ ಅವರಿಗೆ ನೀವು ಸಹಾಯ ಸಲ್ಲಿಸಬಲ್ಲಿರಿ.



ಪರಿಣಾಮಕಾರಿಯಾಗಿ ಅದ್ಭುತ ರೀತಿಯಲ್ಲಿ ಸಹಾಯ ಮಾಡಲು ನಿಷ್ಕಪಟ–ರಾದವರಿಗೆ ದೈವೀ ಕೃಪೆ ಸದಾ ಇರುತ್ತದೆ

**–ಶ್ರೀಮಾತೆ**

*

(2/103) ಇತರರ ಮಧ್ಯದಲ್ಲಿ ಜೀವಿಸುತ್ತ ನೀವು ಯಾವಾಗಲೂ ಒಂದು ದೈವೀ ಉದಾಹರಣೆಯಾಗಬೇಕು, ಅವರು ತಿಳಿದುಕೊಳ್ಳಲು ಮತ್ತು ದೈವೀ ಜೀವನದಲ್ಲಿ ಪ್ರವೇಶಿಸಲು ಒಂದು ಅವಕಾಶ ಒದಗಿಸುವವರಾಗಿರಬೇಕು, ಅದಕ್ಕಿಂತ ಹೆಚ್ಚಿನ–ದೇನಲ್ಲ. ಅವರು ಪ್ರಗತಿ ಪಥದಲ್ಲಿ ಸಾಗುವಂತೆ ಮಾಡಲು ನಿಮ್ಮಲ್ಲಿ ಆಸೆ ಇರ–ಬಾರದು, ಏಕೆಂದರೆ ಅದೂ ಕೂಡ ಸ್ವೇಚ್ಛೆಯ ಏನೋ ಒಂದು ವಿಷಯವಾಗುತ್ತದೆ.

ನಿಮ್ಮ ಅಂತರಂಗದೊಳಗಿರುವ ದೈವಿಕತೆಯೊಂದಿಗೆ ನೀವು ನಿಶ್ಚಿತವಾಗಿ ಏಕತೆ ಪಡೆಯುವವರೆಗೆ ಬಾಹ್ಯದೊಡನೆ ನಿಮ್ಮ ಸಂಬಂಧಗಳಲ್ಲಿ ಈ ಏಕತೆಯ ಅನುಭವವನ್ನು ಸ್ವತಃ ಪಡೆದವರ ಸರ್ವಾನುಮತದ ಉಪದೇಶದ ಪ್ರಕಾರ ಕಾರ್ಯ ಕೈಕೊಳ್ಳುವುದು ಅತ್ಯಂತ ಶ್ರೇಷ್ಠವಾದದ್ದು.

ಸತತ ಧರ್ಮಬುದ್ಧಿಯನ್ನು ಹೊಂದಿರುವುದು, ಯಾವುದರಿಂದಲೂ ಕ್ಷೋಭೆಗೊಳಗಾಗದೆ ಇರುವುದು, ಇತರರಿಗೆ ಕ್ಷೋಭೆಯುಂಟಾಗುವುದಕ್ಕೆ ಕಾರಣ–ರಾಗದೆ ಇರುವುದು, ಸಾಧ್ಯವಿದ್ದಷ್ಟರ ಮಟ್ಟಿಗೆ ಅವರಿಗೆ ವೇದನೆಯುಂಟಾಗದಂತೆ ಮಾಡುವುದು ಇದೆಲ್ಲ ಒಂದು ನಿಯಮದಂತಿರಬೇಕು.

*

(13/169–70) ನೇತಾರರು ಯಾವಾಗಲೂ ಒಂದು ಉದಾಹರಣೆ ನೀಡು–ವಂತಿರಬೇಕು ತಮ್ಮ ಕಾಳಜಿಗೆ ಒಳಪಟ್ಟವರಿಂದ ಅವರು ಬೇಡುವ ಸದ್ಗುಣಗಳನ್ನು ನೇತಾರರು ಸ್ವತಃ ಆಚರಣೆಯಲ್ಲಿ ತರುತ್ತಿರಬೇಕು. ಅವರು ಅರ್ಥ ಮಾಡಿಕೊಳ್ಳ–ಬಲ್ಲವರು, ಸಹನೆಯುಳ್ಳವರು, ತಾಳಿಕೊಳ್ಳುವ ಸಾಮರ್ಥ್ಯವುಳ್ಳವರು, ಸಹಾನು–ಭೂತಿ ತೋರಿಸುವವರು, ಮೈತ್ರಿಭಾವದಿಂದ ಕೂಡಿದ ಸದಿಚ್ಛೆ ಉಳ್ಳವರು ಆಗಿರ–ಬೇಕು. ಅದು ತಮಗೆ ಮಿತ್ರರನ್ನು ದೊರಕಿಸಿಕೊಡಲಿ ಎಂಬ ಅಹಂಮನ್ಯತೆಯ ಭಾವದಿಂದ ಕೂಡಿರಬಾರದು, ಆದರೆ ಇತರರನ್ನು ಅರ್ಥಮಾಡಿಕೊಂಡು ಅವರಿಗೆ ಸಹಾಯ ಸಲ್ಲಿಸುವ ಔದಾರ್ಯದಿಂದ ಕೂಡಿರಬೇಕು.

ತನ್ನನ್ನು, ತನ್ನ ಇಷ್ಟಗಳನ್ನು ಹಾಗೂ ಆದ್ಯತೆಗಳನ್ನು ಮರೆತು ಬಿಡುವುದು ನಿಜವಾದ ನೇತಾರನಾಗುವುದಕ್ಕೆ ಅತ್ಯಂತ ಅನಿವಾರ್ಯವಾದದ್ದು.

*

ಮನುಷ್ಯನ ಅಂತರಂಗದಲ್ಲಿಯೇ ನಿಜವಾದ ನೇತಾರನಿದ್ದಾನೆ.

## ನಿಜವಾದ ನೇತಾರನಾಗುವುದಕ್ಕೆ ನಿಬಂಧನೆಗಳು

**ತನ್ನನ್ನು ಮರೆತು ಬಿಡುವುದು :**

ನಿಜವಾದ ನೇತಾರನಾಗುವುದಕ್ಕೆ ಮನುಷ್ಯ ತನ್ನನ್ನು ಮರೆತು ಬಿಡುವುದು ಅತ್ಯಂತ ಅವಶ್ಯವಾದ ನಿಬಂಧನೆಗಳಲ್ಲಿ ಒಂದು, ಸ್ವಾರ್ಥದ ಉದ್ದೇಶ ಹೊಂದಿರುವ ಯಾವ ಆಸಕ್ತಿಯೂ ಇರಬಾರದು, ತನಗಾಗಿ ಏನನ್ನೂ ಬಯಸಬಾರದು, ತನ್ನನ್ನು ಅವಲಂಬಿಸಿದ ಗುಂಪಿನ, ಇಡಿಯಾದ ಸಮುದಾಯದ ಒಳ್ಳೆಯದಕ್ಕಾಗಿ ಕಾರ್ಯ ಮಾಡುವುದು, ಕೇವಲ ಆ ಗುರಿಯನ್ನು ಮನಸ್ಸಿನಲ್ಲಿಟ್ಟುಕೊಂಡಿರುವುದು, ತನ್ನ ಕಾರ್ಯದ ಮೂಲಕ ವೈಯಕ್ತಿಕ ಲಾಭವನ್ನು ಬಯಸದೆ ಇರುವುದು ಅವಶ್ಯವಾಗಿದೆ.

ಸಣ್ಣ ಗುಂಪಿನ ನೇತಾರನೊಬ್ಬ ಈ ರೀತಿ ವಿಶಾಲ ಗುಂಪಿನ, ದೇಶದ ಪರಿಪೂರ್ಣ ನೇತಾರನಾಗಬಲ್ಲ ಮತ್ತು ಸಾಮೂಹಿಕ ಪಾತ್ರ ವಹಿಸಲು ಸಿದ್ಧತೆ ಮಾಡಿಕೊಳ್ಳಬಲ್ಲ. ಅದು ತರಬೇತು ನೀಡುವ ಅತಿ ಮಹತ್ವದ ಸ್ಥಾನ ಮತ್ತು ನಿಜವಾಗಿ ನಾವು ಅದನ್ನು ಇಲ್ಲಿ ಕೈಕೊಳ್ಳಲು ಪ್ರಯತ್ನಿಸಿದ್ದೇವೆ ಮತ್ತು ಆ ಪ್ರಯತ್ನ–ವನ್ನು ಮುಂದುವರಿಸಿಕೊಂಡು ಬಂದಿದ್ದೇವೆ. ಹಾಗಾಗಿ ಪ್ರತಿಯೊಬ್ಬನಿಗೆ ಚಿಕ್ಕ ಅಥವಾ ದೊಡ್ಡ ಜವಾಬ್ದಾರಿಯನ್ನು ಕೊಡಬಹುದಾಗಿದೆ, ಅದರಿಂದಾಗಿ ಅವನು ನಿಜವಾದ ನೇತಾರನಾಗುವುದನ್ನು ಕಲಿತುಕೊಳ್ಳಬಹುದಾಗಿದೆ.

ನಿಜವಾದ ನೇತಾರನಾಗಲು ಮನುಷ್ಯ ಸಂಪೂರ್ಣವಾಗಿ ನಿರಾಸಕ್ತನಾಗಿರ–ಬೇಕು, ಸಾಧ್ಯವಿದ್ದಷ್ಟು ತನ್ನ ಬಗೆಗಿರುವ ಹೆಚ್ಚುಗಾರಿಕೆಯನ್ನು, ಸ್ವಾರ್ಥದ ಚಲನೆ–ಗಳನ್ನು ಅಳಿಸಿ ಹಾಕಬೇಕು. ನೇತಾರನಾಗಲು ಮನುಷ್ಯ ತನ್ನ ಅಹಂಕಾರದ ಮೇಲೆ ಪ್ರಭುತ್ವ ಪಡೆಯಬೇಕು.

**–ಶ್ರೀ ಅರವಿಂದರು**

*



**ಎಲ್ಲರಲ್ಲಿ ಕಾರ್ಯಮಾಡುತ್ತಿರುವ ಏಕೈಕನಾದವನನ್ನು ಕುರಿತು ವಿಶಾಲ ದೃಷ್ಟಿ ಹೊಂದಿರುವುದು**

(20/238) ಪ್ರತಿಯೊಬ್ಬನು ತಿಳಿದೊ, ತಿಳಿಯದೆಯೊ ವಿಶ್ವಂಭರ ಸಾಮರ್ಥ್ಯದ ಉಪಕರಣವಾಗಿರುತ್ತಾನೆ ಮತ್ತು ಆಂತರಿಕ ಸಾನ್ನಿಧ್ಯ ಹೊರತುಪಡಿಸಿ ಅಹಂಕಾರ–ಯುಕ್ತ ಗರ್ವ ಹೊಂದಿರುವ ಮೂರ್ಖತನವನ್ನು ಸಮರ್ಥಿಸಿಕೊಳ್ಳುವುದಕ್ಕೆ ಒಂದು ಬಗೆಯ ಉಪಕರಣವಾಗಿರುವಿಕೆ ಮತ್ತು ಇನ್ನೊಂದು ಬಗೆಯ ಉಪಕರಣ–ವಾಗಿರುವಿಕೆ ಇವುಗಳ ನಡುವೆ ಮೂಲಭೂತ ವ್ಯತ್ಯಾಸವಿರುವುದಿಲ್ಲ. ದಿವ್ಯಾತ್ಮನ ದೈವೀಕೃಪೆಯಿಂದಾಗಿ ಜ್ಞಾನ ಮತ್ತು ಅಜ್ಞಾನ ಇವುಗಳ ನಡುವೆ ವ್ಯತ್ಯಾಸವಿರುವುದು ಕಂಡುಬರುತ್ತದೆ, ದೈವೀ ಸಾಮರ್ಥ್ಯದ ಉಸಿರು, ತಾನು ಪಟ್ಟಿ ಮಾಡಿದಲ್ಲಿ, ಬೀಸುತ್ತದೆ, ಒಂದು ದಿನ ಒಬ್ಬನನ್ನು, ಮರುದಿನ ಇನ್ನೊಬ್ಬನನ್ನು ತನ್ನ ಶಬ್ದದೊಂದಿಗೆ ಇಲ್ಲವೆ ದಿವ್ಯಾನಂದದೊಂದಿಗೆ ತುಂಬುತ್ತದೆ, ಕುಂಬಾರ ಒಂದು ಗಡಿಗೆಗೆ ಇನ್ನೊಂದು ಗಡಿಗೆಗಿಂತ ಹೆಚ್ಚು ಪರಿಪೂರ್ಣ ಆಕಾರ ಕೊಟ್ಟರೆ ಅದರ ಶ್ರೇಯಸ್ಸು ಗಡಿಗೆಗೆ ಸಲ್ಲುವುದಿಲ್ಲ, ಆದರೆ ಅದನ್ನು ರೂಪಿಸಿದ ಕುಂಬಾರನಿಗೆ ಸಲ್ಲುತ್ತದೆ. ನಮ್ಮ ಮನಸ್ಸಿನ ಗುಣಧರ್ಮ "ಇದು ನನ್ನ ಬಲ" ಇಲ್ಲವೆ "ಭಗವಂತನ ಬಲ ನನ್ನಲ್ಲಿರುವುದನ್ನು ಇಲ್ಲಿ ನೋಡಿರಿ" ಎಂದು ಹೇಳುವಂತಿರಬಾರದು, ಆದರೆ ಅದಕ್ಕೂ ಹೆಚ್ಚಾಗಿ "ಈ ಮನಸ್ಸಿನಲ್ಲಿ ಹಾಗೂ ದೇಹದಲ್ಲಿ ದೈವೀ ಸಾಮರ್ಥ್ಯ ಕಾರ್ಯ ಮಾಡುತ್ತದೆ ಹಾಗೂ ಎಲ್ಲ ಮನುಷ್ಯರಲ್ಲಿ, ಪಶುಗಳಲ್ಲಿ, ಸಸ್ಯಗಳಲ್ಲಿ, ಲೋಹಗಳಲ್ಲಿ, ಪ್ರಜ್ಞೆ ಹೊಂದಿ ಜೀವಿಸುವವುಗಳಲ್ಲಿ, ತೋರಿಕೆಗೆ ಪ್ರಜ್ಞಾರಹಿತ ಮತ್ತು ನಿರ್ಜೀವವಾದವುಗಳಲ್ಲಿ ಕಾರ್ಯಕೈಕೊಳ್ಳುವ ದೈವೀ ಸಾಮರ್ಥ್ಯ ಅದೇ ಆಗಿರುತ್ತದೆ" ಎಂದು ಹೇಳುವಂತಾಗಬೇಕು. ಏಕೈಕನಾದವನ ಬಗೆಗೆ ಮತ್ತು ಇಡೀ ವಿಶ್ವ ಅವನ ದೈವೀ ಕ್ರಿಯೆಯ ಹಾಗೂ ಕ್ರಮೇಣ ಆಗುವ ಪ್ರಕಟಣೆಯ ಸಮಾನ ರೂಪದ ಉಪಕರಣ ಎಂಬುದರ ಬಗೆಗೆ ಹೊಂದಿರುವ ಈ ವಿಶಾಲ ದೃಷ್ಟಿಕೋನ ನಮ್ಮ ಇಡೀ ಅನುಭವವಾದರೆ ನಮ್ಮ ರಾಜಸಿಕ ಅಹಂಕಾರವನ್ನು ನಮ್ಮಿಂದ ಹೊರಹಾಕಲು ಸಹಾಯ ನೀಡುತ್ತದೆ ಮತ್ತು ಸಾತ್ವಿಕ ಅಹಂಕಾರ ಕೂಡ ನಮ್ಮ ಸ್ವಭಾವದಿಂದ ಹೊರಟುಹೋಗಲು ಪ್ರಾರಂಭಿಸುತ್ತದೆ.

*

**ದೈವೀ ಸತ್ಯಕ್ಕೆ ಅಂಟಿಕೊಳ್ಳುವುದು**

(14/206) ಯಶಸ್ಸಿನ ಬಗ್ಗೆ ಆತುರರಾಗುವುದಕ್ಕಿಂತ ಹೆಚ್ಚಾಗಿ ಸತ್ಯದ ಬಗ್ಗೆ ಹೆಚ್ಚು ಆತುರವುಳ್ಳವರಾಗಿರಿ.

**–ಶ್ರೀಮಾತೆ**

*

(1/706) ಸತ್ಯವೊಂದು ಕಲ್ಲುಬಂಡೆ, ಅದರ ಆಧಾರದ ಮೇಲೆ ಜಗತ್ತನ್ನು ನಿರ್ಮಿಸಲಾಗಿದೆ, 'ಸತ್ಯೇನ ತಿಷ್ಠತೆ ಜಗತ್' ಮಿಥ್ಯೆ ಬಲದ ಮೂಲವೆಂದಿಗೂ ಆಗದು, ಒಂದು ಚಲನೆಯ ಮೂಲದಲ್ಲಿ ಮಿಥ್ಯೆಯಿದ್ದರೆ ಆ ಚಲನೆ ವಿಫಲ–ವಾಗುವುದು ನಿಶ್ಚಿತ. ಚಲನೆಯೊಂದು ಸತ್ಯದ ಆಧಾರದ ಮೇಲೆ ಮುಂದುವರಿ–ಯುತ್ತಿದ್ದರೆ ವ್ಯವಹಾರ ಕೌಶಲ ಸಹಾಯ ಮಾಡಬಲ್ಲದು. ವ್ಯವಹಾರ ಕೌಶಲವನ್ನೇ ಮೂಲತತ್ವವನ್ನಾಗಿ ಮಾಡುವುದು ಅಸ್ತಿತ್ವದ ನಿಯಮಗಳನ್ನು ಉಲ್ಲಂಘಿಸಿದಂತೆ.

*

(14/182) ಯಾವಾಗಲೂ ಸತ್ಯವಾದಿಯಾಗಿರುವುದಕ್ಕಿಂತ ಶ್ರೇಷ್ಠತರ ಧೈರ್ಯ ಬೇರೊಂದಿಲ್ಲ.

*

**ಜಾಗರೂಕರಾಗಿರುವುದು**

(3/202) ಜಾಗರೂಕತೆಯ ಅರ್ಥ ಎಚ್ಚರದಿಂದಿರುವುದಾಗಿದೆ, ತನ್ನ ಹುಷಾರಿ–ನಲ್ಲಿರುವುದು, ನಿಷ್ಕಪಟನಾಗಿರುವುದು – ಎಂದಿಗೂ ಅನಿರೀಕ್ಷಿತವಾಗಿ ಆಶ್ಚರ್ಯ–ಕ್ಕೊಳಗಾಗದೆ ಇರುವುದು.

ಜಾಗರೂಕರಾಗಿರುವುದು ನಿಮ್ಮನ್ನು ಕೆಳಗೆಳೆಯುವುದನ್ನು ವಿರೋಧಿಸಲಿಕ್ಕಾಗಿ ಅಷ್ಟೇ ಅಲ್ಲ, ಆದರೆ ಎಲ್ಲಕ್ಕೂ ಮಿಗಿಲಾಗಿ ಪ್ರಗತಿಗಾಗಿ ಇರುವ ಅವಕಾಶ, ದೌರ್ಬಲ್ಯವನ್ನು ಕಳೆದುಕೊಳ್ಳುವ ಅವಕಾಶ, ಪ್ರಲೋಭನೆಗೆ ಪ್ರತಿರೋಧವೊಡ್ಡುವ ಅವಕಾಶ, ಏನನ್ನಾದರೂ ಕಲಿತುಕೊಳ್ಳುವ ಅವಕಾಶ, ಏನನ್ನೋ ಸರಿಪಡಿಸುವ ಅವಕಾಶ, ಯಾವುದೊಂದರ ಮೇಲೆ ಪ್ರಭುತ್ವ ಪಡೆಯುವ ಅವಕಾಶ ಇವುಗಳನ್ನು ಕಳೆದುಕೊಳ್ಳದೆ ಇರುವುದು. ನೀವು ಜಾಗರೂಕರಾಗಿದ್ದರೆ ವರ್ಷಗಳ ಕಾಲ ತೆಗೆದು–ಕೊಳ್ಳಬೇಕಾದುದನ್ನು ಕೆಲವೇ ದಿನಗಳಲ್ಲಿ ಮಾಡಬಲ್ಲಿರಿ. ನೀವು ಜಾಗರೂಕರಾಗಿ–



ದ್ದರೆ ನಿಮ್ಮ ಜೀವನದ ಪ್ರತಿಯೊಂದು ಪರಿಸ್ಥಿತಿಯನ್ನು, ಕ್ರಿಯೆಯನ್ನು, ಚಲನೆಯನ್ನು ಗುರಿಯ ಸಮೀಪಕ್ಕೆ ಸಾಗಿ ಹೋಗುವಂತೆ ಬದಲಿಸಬಲ್ಲಿರಿ.

**–ಶ್ರೀಮಾತೆ**

*

**ಮನುಷ್ಯ ತನ್ನ ದೌರ್ಬಲ್ಯವನ್ನು ಗುರುತಿಸುವುದು**

ಮನುಷ್ಯ ತನ್ನ ದೌರ್ಬಲ್ಯಗಳನ್ನು ಮತ್ತು ಮಿಥ್ಯಾಚಾರದ ಚಲನೆಗಳನ್ನು ಗುರುತಿಸುವುದು ಮತ್ತು ಅವುಗಳಿಂದ ದೂರವಾಗುವುದು ಮುಕ್ತಿ ಪಡೆಯುವುದರತ್ತ ಸಾಗುವ ಮಾರ್ಗವಾಗಿದೆ.

ಮನುಷ್ಯ ಸ್ಥಿರಗೊಂಡ ಮನಸ್ಸು ಹಾಗೂ ಪ್ರಾಣಿಕಗಳಿಂದ ವಸ್ತು–ವಿಷಯಗಳನ್ನು ನೋಡಲು ಶಕ್ತನಾಗುವವರೆಗೆ ತನ್ನನ್ನು ಹೊರತು ಪಡಿಸಿ ಬೇರೆ ಯಾರನ್ನೂ ತೀರ್ಮಾನಕ್ಕೆ ಒಳಪಡಿಸದೆ ಇರುವುದು ಒಂದು ಅತ್ಯುತ್ಕೃಷ್ಟ ನಿಯಮವಾಗಿದೆ. ಹಾಗೆಯೇ ಬಾಹ್ಯ ತೋರಿಕೆಯ ಬಲದ ಮೇಲೆ ನಿಮ್ಮ ಮನಸ್ಸು ಅವಸರದ ಅಸ್ಪಷ್ಟ ಭಾವನೆ ತಂದುಕೊಳ್ಳುವುದಕ್ಕೆ ಮತ್ತು ಪ್ರಾಣಿಕ ಅದರ ಮೇಲೆ ಕಾರ್ಯ ಮಾಡುವುದಕ್ಕೆ ಎಡೆಮಾಡಿಕೊಡಬೇಡಿರಿ.

ಆಂತರಿಕ ಸತ್ತೆಯಲ್ಲಿ ಒಂದು ಸ್ಥಾನವಿರುತ್ತದೆ, ಅಲ್ಲಿ ಮನುಷ್ಯ ಯಾವಾಗಲೂ ಸ್ಥಿರತೆಯಲ್ಲಿ ಉಳಿದುಕೊಳ್ಳಬಹುದು ಮತ್ತು ಅಲ್ಲಿಂದ ಸ್ಥಿರಸ್ಥಾಯಿತ್ವ ಹಾಗೂ ನ್ಯಾಯಪರತೆಗಳಿಂದ ಬಾಹ್ಯಪ್ರಜ್ಞೆಯ ಗಲಿಬಿಲಿಗೊಳ್ಳುವಿಕೆಯನ್ನು ವೀಕ್ಷಿಸಬಹುದು ಮತ್ತು ಬದಲಿಸಲು ಕಾರ್ಯಕೈಕೊಳ್ಳಬಹುದು. ನೀವು ಆ ಆಂತರಿಕ ಸ್ಥಿರತೆಯಲ್ಲಿ ಉಳಿದುಕೊಳ್ಳಲು ಶಕ್ತರಾದರೆ ನಿಮ್ಮ ಸುಭದ್ರ ಆಧಾರವನ್ನು ಕಂಡುಕೊಂಡಿರುತ್ತೀರಿ.

**–ಶ್ರೀ ಅರವಿಂದರು**

*

**ಸ್ವ–ನಿಯಂತ್ರಣವನ್ನು ಹೊಂದಿರುವುದು:**

(15/59)

1. ಇತರರ ಮೇಲೆ ನಿಯಂತ್ರಣ ಪಡೆಯುವುದಕ್ಕೆ ಮನುಷ್ಯ ಸ್ವ–ನಿಯಂತ್ರಣವನ್ನು ಸಾಧಿಸಿರುವುದು ಅತ್ಯವಶ್ಯವಾದ ನಿಬಂಧನೆ.

2. ಆದ್ಯತೆಗಳಿಲ್ಲದೆ ಇರಬೇಕು, ಒಬ್ಬನನ್ನು ಇಷ್ಟಪಡುವುದು, ಇನ್ನೊಬ್ಬನತ್ತ ತಿರಸ್ಕಾರ ವ್ಯಕ್ತಪಡಿಸುವುದು ಇರಬಾರದು – ಪ್ರತಿಯೊಬ್ಬರೊಡನೆ ಸಮತೆ–ಯಿಂದಿರಬೇಕು.

3. ತಾಳ್ಮೆಯಿಂದಿರುವುದು, ಸಹನಶೀಲರಾಗಿರುವುದು.

ಹಾಗೆಯೇ ಅತ್ಯವಶ್ಯವಾದದ್ದನ್ನಷ್ಟೇ ಕುರಿತು ಮಾತನಾಡುವುದು, ಹೆಚ್ಚಾದ–ದ್ದನ್ನಲ್ಲ.

**–ಶ್ರೀಮಾತೆ**

*

(12/195) ಬಹಳ ಸ್ಥಿರತೆಯಿಂದಿರಿ ಹಾಗೂ ಸಹನಶೀಲರಾಗಿರಿ; ಇತರರ ಮೇಲೆ ಪ್ರಭುತ್ವ ನಡೆಸಬೇಕಾದರೆ ಮನುಷ್ಯ ಮೊದಲು ತನ್ನ ಮೇಲೆ ಪ್ರಭುತ್ವ ಪಡೆದಿರಬೇಕು.

**–ಶ್ರೀಮಾತೆ**

*

**ಪರಿಪೂರ್ಣವಾಗಿ ನಿಷ್ಕಪಟರಾಗಿರುವುದು:**

(8/398) ಯಾವುದೇ ಬಗೆಯ ಆದ್ಯತೆ ನೀಡುವಿಕೆ, ಆಸೆ, ಆಕರ್ಷಣೆ, ಸೇರ–ದಿರುವಿಕೆ, ಸಹಾನುಭೂತಿ, ಜುಗುಪ್ಸೆ, ಆಸಕ್ತಿ, ವಿಕರ್ಷಣೆ ಇವೆಲ್ಲ ಇಲ್ಲದಿರುವುದು ಪರಿಪೂರ್ಣವಾಗಿ ನಿಷ್ಕಪಟರಾಗಿರುವುದಕ್ಕೆ ಅತ್ಯಗತ್ಯದ್ದಾಗಿದೆ. ವಸ್ತು–ವಿಷಯ–ಗಳನ್ನು ಕುರಿತು ಮನುಷ್ಯ ಇಡಿಯಾದ, ಸಮಗ್ರ ದೃಷ್ಟಿ ಹೊಂದಿರಬೇಕು, ಅದರಲ್ಲಿ ಎಲ್ಲವೂ ಅದರದರ ಸ್ಥಾನದಲ್ಲಿರುತ್ತದೆ. ಎಲ್ಲ ವಸ್ತು–ವಿಷಯಗಳ ಬಗ್ಗೆ ಮನುಷ್ಯ ಒಂದೇ ಮನೋಧರ್ಮ ಹೊಂದಿರಬೇಕು, ಆ ಮನೋಧರ್ಮ ನಿಜವಾದ ದೃಷ್ಟಿ–ಯುಳ್ಳದ್ದಾಗಿರಬೇಕು. ಮನುಷ್ಯನಿಗೆ ಈ ಕಾರ್ಯಕ್ರಮವನ್ನು ಸಿದ್ಧಿಸಿಕೊಳ್ಳುವುದು ಸ್ಪಷ್ಟವಾಗಿ ಬಹಳ ಕಠಿಣವಾದದ್ದು. ಅವನು ತನ್ನನ್ನು ದೈವೀಕರಿಸಿಕೊಳ್ಳಲು ನಿರ್ಧರಿಸಿರದಿದ್ದರೆ, ತನ್ನೊಳಗಿರುವ ಈ ಎಲ್ಲ ವೈರುಧ್ಯಗಳಿಂದ ಮುಕ್ತನಾಗುವುದು ಬಹುಮಟ್ಟಿಗೆ ಅಸಾಧ್ಯವೆಂದೇ ತೋರಿಬರುತ್ತದೆ. ಮನುಷ್ಯ ತನ್ನಲ್ಲಿ ಅವನ್ನೆಲ್ಲ ಕೊಂಡೊಯ್ಯುತ್ತಿರುವವರೆಗೆ ಅವನು ನಿಷ್ಕಪಟನಾಗಲಾರ. ಸ್ವಯಂಚಾಲಿತ–ವೆನ್ನುವಂತೆ ಮಾನಸಿಕ, ಪ್ರಾಣಿಕ ಮತ್ತು ಭೌತಿಕವಾದ ಕಾರ್ಯಗತಿಯೂ ಕೂಡ ತಪ್ಪಾಗುತ್ತದೆ. ನಾನು ಭೌತಿಕದ ಮೇಲೆ ಒತ್ತುಕೊಟ್ಟು ಹೇಳುತ್ತಿದ್ದೇನೆ, ಏಕೆಂದರೆ



ಇಂದ್ರಿಯಗಳ ಕಾರ್ಯವೂ ಕೂಡ ವಕ್ರವಾಗುತ್ತದೆ, ಮನುಷ್ಯನಲ್ಲಿ ಆದ್ಯತೆ ನೀಡುವ ಒಲವಿರುವವರೆಗೆ ಅವನು ವಸ್ತು–ವಿಷಯಗಳನ್ನು, ಅವುಗಳ ನೈಜತೆಯಲ್ಲಿ, ನೋಡಲಾರ, ಅವುಗಳ ರುಚಿ ಕಂಡುಕೊಳ್ಳಲಾರ, ಅವುಗಳ ಬಗ್ಗೆ ನೈಜ ಭಾವನೆ ತಂದುಕೊಳ್ಳಲಾರ. ನಿಮಗೆ ಸಂತೋಷ ನೀಡುವ ಹಾಗೂ ನೀಡದಿರುವ ವಸ್ತು–ವಿಷಯಗಳು ಇರುವವರೆಗೆ, ಕೆಲವು ವಸ್ತು–ವಿಷಯಗಳ ಬಗ್ಗೆ ಆಕರ್ಷಣೆ ಇನ್ನು ಕೆಲವು ವಸ್ತು–ವಿಷಯಗಳ ಬಗ್ಗೆ ವಿಕರ್ಷಣೆ ಇರುವವರೆಗೆ ನೀವು ಆ ವಸ್ತು–ವಿಷಯಗಳನ್ನು ಅವುಗಳ ನೈಜತೆಯಲ್ಲಿ ನೋಡಲಾರಿರಿ. ನೀವು ಅವುಗಳನ್ನು ನಿಮ್ಮ ಪ್ರತಿಕ್ರಿಯೆಗಳ ಮೂಲಕ, ಆದ್ಯತೆ ನೀಡುವುದರ ಮೂಲಕ ಇಲ್ಲವೆ ನಿಮ್ಮ ವಿಕರ್ಷಣೆಯ ಮೂಲಕ ನೋಡುತ್ತೀರಿ. ಇಂದ್ರಿಯಗಳು ಉಪಕರಣಗಳು, ಇವು ಸಂವೇದನೆಗಳು, ಭಾವನೆಗಳು ಹಾಗೂ ಯೋಚನೆಗಳ ಹಾಗೆ ಸರಿಯಾದ ಕಾರ್ಯ ಮಾಡದೆ ಹೋಗುತ್ತವೆ. ಆದ್ದರಿಂದ ನೀವು ನೋಡಿದ್ದರ ಬಗ್ಗೆ, ಭಾವನೆಗೆ ಹಾಗೂ ಅನುಭವಕ್ಕೆ ತಂದುಕೊಂಡಿದ್ದರ ಬಗ್ಗೆ, ಯೋಚಿಸುವುದರ ಬಗ್ಗೆ ನಿಶ್ಚಿತತೆ ಪಡೆಯಬೇಕಾದರೆ ನಿಮ್ಮಲ್ಲಿ ಸಂಪೂರ್ಣವಾಗಿ ಅನಾಸಕ್ತಿ ಇರಬೇಕು, ಸ್ಪಷ್ಟವಾಗಿ ಇದು ಸುಲಭ ಕಾರ್ಯವಲ್ಲ. ಆ ಅನಾಸಕ್ತಿ ಇಲ್ಲದೆ ಇರುವವರೆಗೆ ನಿಮ್ಮ ಗ್ರಹಿಕೆ ಇಡಿಯಾಗಿ ಸತ್ಯವಾದದ್ದಾಗಿರುವುದಿಲ್ಲ.

**–ಶ್ರೀಮಾತೆ**

*

## ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದು

(3/160) ನಿಮ್ಮಲ್ಲಿ ಬಹಳಷ್ಟು ಜನರು ನಿಮ್ಮ ಸತ್ತೆಯ ಮೇಲ್ಮೈಯಲ್ಲಿ ಜೀವಿ–ಸುತ್ತೀರಿ, ಬಾಹ್ಯ ಪ್ರಭಾವಗಳ ಸ್ಪರ್ಶಕ್ಕೆ ಒಳಗಾಗಿರುತ್ತೀರಿ. ನಿಮ್ಮ ದೇಹದಿಂದ ಹೊರಗೆ ಪ್ರಕ್ಷೇಪಿಸಿಕೊಂಡ ರೀತಿಯಲ್ಲಿ ಜೀವಿಸುತ್ತೀರಿ. ನಿಮ್ಮ ರೀತಿಯಲ್ಲಿಯೇ ತನ್ನನ್ನು ಪ್ರಕ್ಷೇಪಿಸಿಕೊಂಡ ಅಸಂತುಷ್ಟ ಸತ್ತೆಯನ್ನು ಭೇಟಿಮಾಡಿದಾಗ ಆತಂಕ–ಕ್ಕೊಳಗಾಗುತ್ತೀರಿ. ನೀವು (ಮನಸ್ಸಿನಲ್ಲಿ) ಹಿಂದೆ ಸರಿದು ನೋಡುವ ರೂಢಿ–ಯನ್ನಿರಿಸಿಕೊಂಡಿರದೆ ಇರುವುದರಿಂದ ಆ ಇಡೀ ತೊಂದರೆ ಉಂಟಾಗುತ್ತದೆ. ನೀವು ನಿಮ್ಮೊಳಗೆ ಹಿಂದೆ ಸರಿದು ನಿಂತು ನೋಡಬೇಕು – ಆಳಾತಿ ಆಳದಲ್ಲಿ ಇಳಿದು ಹೋಗುವುದನ್ನು ಕಲಿತುಕೊಳ್ಳಬೇಕು – ಹಿಂದೆ ಹೆಜ್ಜೆ ಇರಿಸಿರಿ, ನೀವು

ಸುರಕ್ಷಿತರಾಗಿರುತ್ತೀರಿ. ಬಾಹ್ಯ ಜಗತ್ತಿನಲ್ಲಿ ಅಲೆದಾಡುತ್ತಿರುವ ಮೇಲು ಮೇಲಿನ ಶಕ್ತಿಗಳ ಅಧೀನಕ್ಕೆ ಒಳಗಾಗಬೇಡಿರಿ. ಏನನ್ನೋ ಕೈಕೊಳ್ಳಲು ನೀವು ಆತುರರಾಗಿದ್ದಾಗಲೂ ಕೂಡ ಸ್ವಲ್ಪ ಕಾಲ ಹಿಂದೆ ಸರಿದು ನೋಡಿರಿ, ಆ ಕಾರ್ಯವನ್ನು ಎಷ್ಟು ಬೇಗನೆ ಹಾಗೂ ಎಂತಹ ಶ್ರೇಷ್ಠತರ ಯಶಸ್ಸಿನೊಂದಿಗೆ ಕೈಕೊಳ್ಳಬಹುದೆಂಬುದನ್ನು ಶೋಧಿಸಿ ಆಶ್ಚರ್ಯಚಕಿತರಾಗುವಿರಿ. ಯಾರಾದರೂ ನಿಮ್ಮ ಮೇಲೆ ಕೋಪಗೊಂಡಿದ್ದರೆ, ಅವನ ಕೋಪದ ಕಂಪನಗಳಲ್ಲಿ ಸಿಕ್ಕಿಹಾಕಿಕೊಳ್ಳಬೇಡಿರಿ, ಹಿಂದೆ ಸರಿದು ಅವಲೋಕಿಸಿರಿ, ಆಗ ಅವನ ಕೋಪಕ್ಕೆ ಆಧಾರವಾಗಲಿ. ಪ್ರತಿಸ್ಪಂದನವಾಗಲಿ ಸಿಗದೆ ಅದು ನಾಶವಾಗುವುದು. ಯಾವಾಗಲೂ ನಿಮ್ಮ ಶಾಂತಿಯನ್ನು ಕಾಯ್ದುಕೊಳ್ಳಿರಿ, ಅದನ್ನು ಕಳೆದುಕೊಳ್ಳುವ ಪ್ರಲೋಭನೆಗೆ ಒಳಗಾಗಬೇಡಿರಿ. ವಿಷಯ ಯಾವುದೇ ಇರಲಿ, ಹಿಂದೆ ಸರಿದು ಯೋಚಿಸದೆ ಅದರ ಬಗ್ಗೆ ನಿರ್ಧಾರ ಕೈಕೊಳ್ಳುವುದು ಬೇಡ. ಹಿಂದೆ ಸರಿದು ಯೋಚಿಸದೆ ಯಾವ ಶಬ್ದವನ್ನೂ ಉಚ್ಚರಿಸಬೇಡಿರಿ. ಹಿಂದೆ ಸರಿದು ಕಂಡುಕೊಳ್ಳದೆ ಯಾವುದೇ ಕ್ರಿಯೆಯಲ್ಲಿ ನಿಮ್ಮನ್ನು ಚೆಲ್ಲಿಕೊಳ್ಳುವುದು ಬೇಡ. ಸಾಮಾನ್ಯ ಜಗತ್ತಿಗೆ ಸೇರಿದುದೆಲ್ಲ ಅಶಾಶ್ವತವಾದದ್ದು, ಅಲ್ಪಕಾಲಿಕವಾದದ್ದು, ಅದನ್ನು ಕುರಿತು ಆತಂಕಕ್ಕೆ ಒಳಗಾಗಬೇಕಾಗಿರುವಂತಹದು ಏನೂ ಇಲ್ಲ. ಯಾವುದು ಉಳಿದುಕೊಳ್ಳುವಂತಹದು, ಶಾಶ್ವತ, ಅಮರ, ಮತ್ತು ಅನಂತವಾದದ್ದು ಆಗಿರುತ್ತದೆಯೋ ಅಂತಹದನ್ನು ದೊರಕಿಸುವುದು, ಗೆದ್ದುಕೊಳ್ಳುವುದು, ವಶಪಡಿಸಿಕೊಳ್ಳುವುದು ಯೋಗ್ಯವಾಗಿರುತ್ತದೆ. ಅದು ದೈವೀ ಪ್ರಕಾಶ, ದೈವೀ ಪ್ರೇಮ ಹಾಗೂ ದೈವೀ ಜೀವನ – ಅದು ಪರಮೋಚ್ಚ ಶಾಂತಿ, ಪರಿಪೂರ್ಣ ಸಂತೋಷ ಕೂಡ ಆಗಿರುತ್ತದೆ, ಹಾಗೆಯೇ ಅದು ಪೃಥ್ವಿಯ ಮೇಲೆ ಎಲ್ಲ ಬಗೆಯ ಪ್ರಭುತ್ವ ಪಡೆಯುವುದಾಗಿದ್ದು ಅದಕ್ಕೆ ಕಿರೀಟ ಪ್ರಾಯವೆನಿಸುವಂತೆ ಸಂಪೂರ್ಣ ದೈವೀ ಪ್ರಕಟಣೆ ಆಗುವುದಿರುತ್ತದೆ. ವಿಷಯಗಳ ಬಗೆಗಿನ ಸಾಪೇಕ್ಷತೆಯನ್ನು ಕುರಿತು ನೀವು ಅರ್ಥಮಾಡಿಕೊಂಡಾಗ, ಏನೇ ಸಂಭವಿಸಲಿ, ನೀವು ಹಿಂದೆ ಸರಿದು ಅಚಂಚಲರಾಗಿ ಉಳಿದುಕೊಂಡು ನೋಡಲು ಶಕ್ತರಾಗುವಿರಿ ಮತ್ತು ದೈವೀ ಶಕ್ತಿಗೆ ಕರೆಕೊಟ್ಟು ಉತ್ತರ ಬರುವುದನ್ನು ಕಾದು ನೋಡುವಿರಿ. ಆಗ ನಿಖರವಾಗಿ ಏನು ಮಾಡಬೇಕಾಗಿದೆ ಎಂಬುದನ್ನು ತಿಳಿದುಕೊಳ್ಳುವಿರಿ. ಆದ್ದರಿಂದ ನೀವು ಬಹಳ ಶಾಂತರಾಗಿರುವವರೆಗೆ ನಿಮಗೆ ಉತ್ತರ ದೊರಕುವುದಿಲ್ಲ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಿರಿ.

**–ಶ್ರೀಮಾತೆ**

*



**ಏಕಾಗ್ರತೆಯಲ್ಲಿರಿ:**

(5/399–400) ಏಕಾಗ್ರತೆಯಲ್ಲಿರುವ ನಿಮ್ಮ ಸಾಮರ್ಥ್ಯ ಸಂಪೂರ್ಣವಾದಾಗ ನೀವು ಪರಿಹರಿಸಲಾಗದ ಸಮಸ್ಯೆ ಇರುವುದಿಲ್ಲ. – ಅಂಕಗಣಿತದ ಸಮಸ್ಯೆಗಳನ್ನು ಕುರಿತು ನಾನು ಹೇಳುತ್ತಿಲ್ಲ (ಶ್ರೀಮಾತೆಯವರು ನಗುತ್ತಾರೆ.) ಅದು ಜೀವನ ನಡೆಸಬೇಕಾದಾಗ ಎದುರಾಗುವ ಸಮಸ್ಯೆಗಳು, ಕೈಕೊಳ್ಳಬೇಕಾದ ನಿರ್ಧಾರಗಳು, ಮನಶ್ಶಾಸ್ತ್ರೀಯ ಸಮಸ್ಯೆಗಳು ಇವುಗಳನ್ನೆಲ್ಲ ಪರಿಹರಿಸುವುದಾಗಿದೆ. ಏಕಾಗ್ರತೆಯ ಈ ಸಾಮರ್ಥ್ಯವನ್ನು ಪ್ರತಿರೋಧಿಸುವುದಾವುದೂ ಇರುವುದಿಲ್ಲ.

ವಾಸ್ತವದಲ್ಲಿ ಒಂದು ಬಿಂದುವನ್ನಾಯ್ದುಕೊಳ್ಳುವುದು ಅನುಕೂಲಕರವಾದದ್ದು, ಮನುಷ್ಯ ಅದರತ್ತ ಏಕಪ್ರಕಾರವಾಗಿ ನೋಡುತ್ತಾನೆ, ಎಷ್ಟೊಂದು ತದೇಕದೃಷ್ಟಿಯಿಂದ ಎಂದರೆ, ಕೆಲ ಸಮಯದ ನಂತರ, ಅವನು ಆ ಬಿಂದುವೇ ಆಗಿ ಬಿಡುತ್ತಾನೆ, ಆಗ ಆ ಬಿಂದುವನ್ನು ನೋಡುತ್ತಿರುವವನು ಹಾಗೂ ಆ ಬಿಂದು ಬೇರೆ, ಬೇರೆಯಾಗಿರುವುದಿಲ್ಲ ಮತ್ತು ಆಗ ಸಾಕಷ್ಟು ದೃಢತೆಯೊಂದಿಗೆ, ಅಚಂಚಲರಾಗಿ, ಯಾವುದರಿಂದಲೂ ವಿಚಲಿತರಾಗದೆ ಅದನ್ನು ಮುಂದುವರಿಸಿದರೆ ನೀವು ಒಂದು ದ್ವಾರದ ಎದುರಿಗೆ ಇರುವುದನ್ನು ಕಂಡುಕೊಳ್ಳುವಿರಿ, ಅದು ತೆರೆದುಕೊಳ್ಳುತ್ತದೆ, ನೀವು ಆ ಬದಿಗೆ ಸಾಗಿ ಹೋಗುತ್ತೀರಿ, ದಿವ್ಯಜ್ಞಾನವನ್ನು ಕಂಡುಕೊಳ್ಳುವಿರಿ.

**–ಶ್ರೀಮಾತೆ**

*

**ಸಮಸ್ಯೆಯನ್ನು ಭಗವಂತನ ಮುಂದಿರಿಸಿರಿ:**

(10/152–53) ಸಮಸ್ಯೆ ಎಂದು ಕಂಡುಬರುವ ಏನೋ ಒಂದನ್ನು ಎದುರಿಸುತ್ತೀರಿ: ಏನು ಹೇಳಬೇಕು, ಏನು ಮಾಡಬೇಕು, ಯಾವ ರೀತಿಯಲ್ಲಿ ಕಾರ್ಯ ಕೈಕೊಳ್ಳಬೇಕು? ಮಾಡಬೇಕಾದುದು ಏನೂ ಇಲ್ಲ. ಕೇವಲ ಭಗವಂತನಿಗೆ ಹೀಗೆ ಹೇಳಬೇಕು: "ನೋಡು, ಅದು ಅಲ್ಲಿ ಹೀಗಿದೆ," ಅಷ್ಟೇ. ನಂತರ ನೀವು ಬಹಳ ಅಚಂಚಲರಾಗಿ ಉಳಿದುಕೊಳ್ಳುತ್ತೀರಿ. ನಂತರ ಸ್ವಯಂ ಪ್ರೇರಣೆಯಿಂದ, ಅದರ ಬಗ್ಗೆ ಯೋಚಿಸದೆ, ಚಿಂತನೆ ಮಾಡದೆ, ಲೆಕ್ಕಾಚಾರ ಮಾಡದೆ, ಯಾವುದೇ ಬಗೆಯ ಚಿಕ್ಕ ಪ್ರಯತ್ನವನ್ನೂ ಮಾಡದೆ ಕೈಕೊಳ್ಳಬೇಕಾದುದನ್ನು ಪೂರೈಸುತ್ತೀರಿ. ಅದರರ್ಥ ಅದನ್ನು ಭಗವಂತ ಮಾಡುತ್ತಾನೆ, ಅದನ್ನು ಕೈಕೊಳ್ಳುವವರು ಇನ್ನು ಮುಂದೆ ನೀವಾಗಿರುವುದಿಲ್ಲ, ಅದನ್ನು ಅವನು ಕೈಕೊಳ್ಳುತ್ತಾನೆ. ಅವನು ಪರಿಸ್ಥಿತಿಗಳನ್ನು,

ಜನರನ್ನು ಸಿದ್ಧಗೊಳಿಸುತ್ತಾನೆ. ಅವನು ನಿಮ್ಮ ಬಾಯಲ್ಲಿ ಇಲ್ಲವೆ ಲೇಖನಿಯಲ್ಲಿ ಶಬ್ದಗಳನ್ನಿರಿಸುತ್ತಾನೆ. ಅವನು ಏನನ್ನೂ ಬಿಡದೆ ಎಲ್ಲವನ್ನೂ ಮಾಡುತ್ತಾನೆ. ನೀವು ಮಾಡುವುದೇನೂ ಉಳಿದಿರುವುದಿಲ್ಲ, ನೀವು ದಿವ್ಯಾನಂದರಲ್ಲಿ ಜೀವಿಸುವಂತೆ ನಿಮ್ಮನ್ನು ಬಿಟ್ಟುಕೊಡುವುದಿರುತ್ತದೆ.

**–ಶ್ರೀಮಾತೆ**

*

(Savitri: p.17)

ದೇವೋಚಿತ ಕ್ರೀಡೆಯಲಿ ಮಾನವ ಸೋಲು–ಗೆಲುವುಗಳನು ಕಂಡುಕೊಳ್ಳುವುದಕಾಗಿ
ಅವಳಾತ್ಮದ ಹೊರಹರಿತವನು ಅದೃಷ್ಟದ ದಾಳದೊಂದಿಗೆ ಚೆಲ್ಲಿಕೊಡಲಾಗಿತ್ತು.
ಅಧೀನತೆಗೆ, ವೇದನೆಗೆ ಒಳಗಾಗುವುದಕಾಗಿ ಅವಳು ಜನಿಸಿರಲಿಲ್ಲ
ಮುನ್ನಡೆಸುವುದು, ಮುಕ್ತಗೊಳಿಸುವುದು ಅವಳ ವೈಭವೋಪೇತ ಪಾತ್ರವಾಗಿತ್ತು

**–ಶ್ರೀ ಅರವಿಂದರು**

*

## ಏನಾಗಬೇಕಾಗಿದೆ ಎಂಬುದನ್ನು ಕುರಿತು ಶ್ರೀಮಾತೆಯವರ ಬಯಕೆ

(13/41) ಪೃಥ್ವಿಯ ಮೇಲೆ, ಭೌತಿಕ ಜಗತ್ತಿನಲ್ಲಿ ನಾನು ತರಬೇಕೆಂದು ಬಯಸುವುದು ಹೀಗಿದೆ:

1. ಪ್ರಜ್ಞೆಯ ಪರಿಪೂರ್ಣತೆ
2. ಸಮಗ್ರ ಜ್ಞಾನ, ಸರ್ವಜ್ಞತೆ
3. ಸೋಲಿಗೊಳಗಾಗದ, ಎದುರಿಸಲಾಗದ, ಅವಿರೋಧ್ಯ ಸಾಮರ್ಥ್ಯ, ಸರ್ವ–ಸಾಮರ್ಥ್ಯ.
4. ಪರಿಪೂರ್ಣವಾದ, ಸತತ ಉಳಿದುಕೊಳ್ಳುವ, ಅಲುಗಾಡಿಸಲಾಗದ ಆರೋಗ್ಯ, ನಿರಂತರ ನವೀಕರಣಗೊಳ್ಳುವ ಚೈತನ್ಯ.
5. ಶಾಶ್ವತ ತಾರುಣ್ಯ, ಸತತ ಬೆಳವಣಿಗೆ, ತಡೆಗೊಳಗಾಗದ ಪ್ರಗತಿ.
6. ಪರಿಪೂರ್ಣ ಸೌಂದರ್ಯ, ಸಂಕೀರ್ಣ ಮತ್ತು ಇಡಿಯಾದ ಸಾಮರಸ್ಯ.
7. ಬರಿದಾಗಿ ಹೋಗದ, ಎಣೆ ಇಲ್ಲದ ಸಂಪತ್ತು, ಈ ಜಗತ್ತಿನ ಎಲ್ಲ ಸಂಪತ್ತಿನ ಮೇಲೆ ಪ್ರಭುತ್ವ.



8. ಗುಣಪಡಿಸುವ ಹಾಗೂ ಸಂತೋಷ ನೀಡುವ ಸ್ವಾಭಾವಿಕ ಗುಣ.
9. ಎಲ್ಲ ಅಪಘಾತಗಳಿಂದ ಪ್ರತಿರಕ್ಷೆ (Immunity) ಇರುವುದು, ಎಲ್ಲ ವಿರೋಧೀ ಶಕ್ತಿಗಳ ಆಕ್ರಮಣಗಳಿಂದ ಹಾನಿ ತಟ್ಟದೆ ಇರುವುದು.
10. ಎಲ್ಲ ಕ್ಷೇತ್ರಗಳಲ್ಲಿ ಹಾಗೂ ಎಲ್ಲ ಚಟುವಟಿಕೆಗಳಲ್ಲಿ ಅಭಿವ್ಯಕ್ತಿಯ ಪರಿಪೂರ್ಣ ಸಾಮರ್ಥ್ಯ.
11. ಬೇರೆ ಬೇರೆ ಭಾಷೆಗಳ ಮೇಲೆ ಸ್ವಾಭಾವಿಕವಾಗಿ ಪ್ರಭುತ್ವ ಪಡೆದಿರುವುದು, ಎಲ್ಲರೂ ತನ್ನನ್ನು ಅರ್ಥಮಾಡಿಕೊಳ್ಳುವಂತೆ ಮಾಡುವ ಸಾಮರ್ಥ್ಯ.
12. ಭಗವಂತ, ನಿನ್ನ ಕಾರ್ಯವನ್ನು ಸಿದ್ಧಿಸಿಕೊಳ್ಳಲು ಅವಶ್ಯವಾಗಿ ಬೇಕಾದ ಉಳಿದೆಲ್ಲವನ್ನು ಹೊಂದಿರುವುದು.

*

(13/42)

1. ವೈಯಕ್ತಿಕವಾಗಿ ಶಾಶ್ವತವಾಗಿ ಪರಮೋಚ್ಚ ಭಗವಂತನ ಅಭಿ–ವ್ಯಕ್ತಿಯಾಗುವುದನ್ನು,
2. ಅತಿಮಾನಸದ ವಿಜಯ, ಪ್ರಕಟಣೆ ಮತ್ತು ಅವುಗಳಿಂದಾಗುವ ಪರಿವರ್ತನೆ ಒಮ್ಮೆಲೆ ಸಂಭವಿಸಬೇಕೆಂಬುದನ್ನು ಮತ್ತು
3. ಸದ್ಯದಲ್ಲಿರುವ ಮತ್ತು ಭವಿಷ್ಯತ್ತಿನಲ್ಲಿ ಬರುವ ಎಲ್ಲ ಲೋಕಗಳಲ್ಲಿ ವೇದನೆ ಮಾಯವಾಗಬೇಕೆಂಬುದನ್ನು ನಾನು ಬಯಸುತ್ತೇನೆ.

**–ಶ್ರೀಮಾತೆ**

*

## ಸಂಯೋಜನೆಯ ರೀತಿ ಮತ್ತು ಶ್ರೇಣಿ ವ್ಯವಸ್ಥೆ

(16/3) ಎಲ್ಲ ಬಗೆಯ ಸಾಮೂಹಿಕ ಕ್ರಿಯೆಯಲ್ಲಿ ಇಲ್ಲವೆ ಉದ್ಯಮದಲ್ಲಿ ನೇತಾರನ, ಕಪ್ತಾನನ ಪಾತ್ರ, ಅವನ ನೇತೃತ್ವದ ಸಾಮರ್ಥ್ಯ ಹಾಗೂ ಕೌಶಲ, ತನ್ನ ಅನುಯಾಯಿಗಳಿಂದ ವಿಧೇಯತೆ ಹಾಗೂ ವಿಶ್ವಾಸವನ್ನು ಕೂಡಲೆ ದೊರಕಿಸುವ ಜಾಣ್ಮೆ ಇವೆಲ್ಲ ಅತ್ಯಂತ ಮಹತ್ವದವಾದವುಗಳು. ಆದರೆ ಇತರರೊಡನೆ ಏಕಮನಸ್ಕರಾಗಿ, ಏಕದೇಹಿಗಳಾಗಿ ವಿಧೇಯರಾಗಿರುವುದನ್ನು, ಕಾರ್ಯಮಾಡು–ವುದನ್ನು ಕಲಿತುಕೊಳ್ಳದೆ ಮೇಲೆ ಹೇಳಿದ ವಿಷಯಗಳನ್ನು ಅಭಿವೃದ್ಧಿಪಡಿಸಿಕೊಳ್ಳುವ ಜನರು ತೀರಕಡಿಮೆ. ತರಬೇತಿಗಾಗಿ ಈ ಕಟ್ಟುನಿಟ್ಟಿನ ಶಿಸ್ತುಪಾಲನೆಯ ಹಾಗೂ

ವಿಧೇಯತೆಯ ಈ ರೂಢಿ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಅಸಮಂಜಸವಾಗಿರುವುದಿಲ್ಲ. ಇದು ಸ್ವಾತಂತ್ರ್ಯದ ಸರಿಯಾದ ಪ್ರಯೋಜನ ಪಡೆಯುವುದಕ್ಕಾಗಿ, ಅದನ್ನು ರಕ್ಷಿಸಿಕೊಂಡು, ಉಳಿಸಿಕೊಂಡು ಹೋಗುವುದಕ್ಕಾಗಿ ಸ್ವಾತಂತ್ರ್ಯದೊಂದಿಗೆ ಕ್ರಮಬದ್ಧತೆ ಅಸಂಗತವಾಗಿರದೆ ಇರುವ ರೀತಿಯಲ್ಲಿ ಇದೆ. ಒಟ್ಟುಗೂಡಿ ಯೋಜಿಸಿದ ಎಲ್ಲ ಬಗೆಯ ಕ್ರಿಯೆಯಲ್ಲಿ ಈ ನಿಯಮ ಅತ್ಯಗತ್ಯವಾಗಿದೆ; ಸಂಯೋಜನೆಯ ರೀತಿ ಅತ್ಯವಶ್ಯವಾಗುತ್ತದೆ. ಸಂಗೀತ ಮೇಳವೊಂದರಲ್ಲಿ ವಾದ್ಯ ನುಡಿಸುವವರು ವೈಯಕ್ತಿಕವಾಗಿ ತಮಗೆ ಇಷ್ಟವೆನಿಸಿದ ರೀತಿಯಲ್ಲಿ ನುಡಿಸಿದರೆ, ಸಂಗೀತ ಸಂಯೋಜನಕಾರನ ಸೂಚನೆಯನ್ನು ತಿರಸ್ಕರಿಸಿದರೆ ಆ ಮೇಳ ಯಶಸ್ವಿಯಾಗುವುದಿಲ್ಲ.

(16/329–30) ಪ್ರತಿಯೊಂದು ಗುಂಪು, ಅದು ನಿಜವಾದದ್ದು ಆಗಿದ್ದರೆ, – ಅಂದರೆ ಅದರ ರಚನೆಗೆ ಒಳಗಾದ ವ್ಯಕ್ತಿಗಳು ಅರ್ಹತೆಗನುಸಾರವಾಗಿ ಇದ್ದರೆ – ಅವಶ್ಯವಾಗಿ ಶ್ರೇಣಿವ್ಯವಸ್ಥೆಗೆ ಒಳಪಡಬೇಕು.

ಈ ಶ್ರೇಣಿ ವ್ಯವಸ್ಥೆಯನ್ನು ಸಿದ್ಧಿಸಿಕೊಳ್ಳುವುದಕ್ಕೆ ಗಣನೀಯ ಅಡೆತಡೆಗಳಿವೆ:

1. ಮೊದಲನೆಯದಾಗಿ ಗುಂಪು ಅಪೂರ್ಣವಾಗಿದ್ದಾಗ – ಅಂದರೆ ಶ್ರೇಣಿ ವ್ಯವಸ್ಥೆ ರಚಿತವಾಗುವುದಕ್ಕೆ ಅವಶ್ಯವಾದ ಸದಸ್ಯರನ್ನು ಹೊಂದಿರದಿದ್ದರೆ ಮತ್ತು ಕೆಲವೊಂದು ಕಾರ್ಯ ಚಟುವಟಿಕೆಗಳ ರೀತಿಗಳ ಇಲ್ಲವೆ ಮಧ್ಯ–ವರ್ತಿಗಳ ಅಭಾವವಿದ್ದಾಗ ಆಗುವ ಅಡಚಣೆ.
2. ತಮಗೆ ವಹಿಸಿಕೊಟ್ಟ ಸ್ಥಾನವನ್ನು ಒಪ್ಪಿಕೊಳ್ಳಲು ಇಡಿಯಾಗಿ ಇಲ್ಲವೆ ಭಾಗಶಃ ತಿರಸ್ಕರಿಸುವ ಸದಸ್ಯರ ಅಶಿಸ್ತಿನಿಂದಾಗುವ ಅಡಚಣೆ.

ಕ್ರಮಬದ್ಧತೆ ಮತ್ತು ಸಾಮರಸ್ಯ ಸ್ಥಾಪಿತಗೊಂಡಾಗ ಬಹಳ ಸ್ವಾಭಾವಿಕವಾಗಿ ಹಾಗೂ ಸ್ವಯಂ ಪ್ರೇರಣೆಯಿಂದ ಶ್ರೇಣಿ ವ್ಯವಸ್ಥೆ ಸಂಘಟಿತಗೊಳ್ಳುತ್ತದೆ.

**–ಶ್ರೀಮಾತೆ**

*

(8/27–29) ಭಗವಂತ ಕೇವಲ ಒಬ್ಬ ವ್ಯಕ್ತಿಯನ್ನು ತನ್ನ ಪ್ರಕಟಣೆಗೆ ಆಯ್ದು–ಕೊಳ್ಳುತ್ತಾನೆಯೆ? ಅಥವಾ ಹಲವಾರು ವ್ಯಕ್ತಿಗಳನ್ನು ಆಯ್ದುಕೊಳ್ಳುತ್ತಾನೆಯೆ? – ಅವನು ಹಲವಾರು ವ್ಯಕ್ತಿಗಳನ್ನು ಆಯ್ದುಕೊಳ್ಳುತ್ತಾನೆ.



ಆದರೆ ಇಲ್ಲಿಯೂ ಕೂಡ ಶ್ರೇಣಿ ವ್ಯವಸ್ಥೆ ಇದೆ, ನಿಜವಾದ ಶ್ರೇಣಿ ವ್ಯವಸ್ಥೆ–ಯನ್ನು ಅರ್ಥಮಾಡಿಕೊಳ್ಳದವನು ಆಧ್ಯಾತ್ಮಿಕ ಜೀವನದ ಬಗ್ಗೆ ಏನನ್ನೂ ತಿಳಿದು–ಕೊಳ್ಳಲಾರನು.

ಈಗಿನ ದಿನಗಳಲ್ಲಿ ಅದು ಜನಪ್ರಿಯವಾಗಿಲ್ಲ, ಮಾನವ ಯೋಚನೆ ಅದಕ್ಕೆ ಆಸ್ಪದ ಕೊಡುವುದಿಲ್ಲ. ಆದರೆ ಆಧ್ಯಾತ್ಮಿಕ ದೃಷ್ಟಿಕೋನದಿಂದ ಅದು ಸ್ವಯಂ–ಚಾಲಿತವಾದದ್ದು, ಸ್ವಯಂಪ್ರೇರಿತವಾದದ್ದು ಮತ್ತು ನಿರ್ವಿವಾದವಾದದ್ದು. ಮತ್ತು ಹಾಗಾಗಿ ಶ್ರೇಣಿ ವ್ಯವಸ್ಥೆ ನಿಜವಾದದ್ದಾಗಿದ್ದರೆ ಅಲ್ಲಿ ಪ್ರತಿಯೊಬ್ಬನಿಗೂ ಅವನದೇ ಸ್ಥಾನವಿರುತ್ತದೆ, ಅವನ ವೈಯಕ್ತಿಕ ಸತ್ಯ ಸಂಪೂರ್ಣವಾಗಿರುತ್ತದೆ, ಅಂದರೆ ಪ್ರತಿಯೊಂದು ಅಂಶ ಅದರದರ ಸ್ಥಾನದಲ್ಲಿದ್ದರೆ ಅದಕ್ಕೆ ಭಗವಂತನೊಡನೆ ಅದರದೇ ಸ್ಥಾನದಲ್ಲಿ ಇಡಿಯಾದ ಮತ್ತು ಸಂಪೂರ್ಣ ಸಂಬಂಧವಿರುತ್ತದೆ. ಹಾಗಿದ್ದಾಗ್ಯೂ ಒಟ್ಟಿನಲ್ಲಿ ಒಂದು ಶ್ರೇಣಿ ವ್ಯವಸ್ಥೆ ಇರುತ್ತದೆ, ಅದು ಸಂಪೂರ್ಣ–ವಾಗಿರುತ್ತದೆ. ಆದರೆ ಆಧ್ಯಾತ್ಮಿಕ ಜೀವನವನ್ನು ಅರ್ಥಮಾಡಿಕೊಳ್ಳಬೇಕಾದರೆ ಮನುಷ್ಯ ಮೊದಲು ಅದನ್ನು ಅರ್ಥಮಾಡಿಕೊಳ್ಳಬೇಕು ಮತ್ತು ಅದು ಬಹಳ ಸುಲಭವಲ್ಲ.

ಪ್ರತಿಯೊಬ್ಬನೂ ತನ್ನಲ್ಲಿಯೇ ಭಗವಂತನ ಪರಿಪೂರ್ಣ ಅಭಿವ್ಯಕ್ತಿಯಾಗಿರ–ಬಹುದು, ಆದರೆ ಅದಕ್ಕಿರುವ ನಿಬಂಧನೆಯೆಂದರೆ ಅವನು ತನ್ನ ಸ್ಥಾನವನ್ನು ಅರಿತಿರುವುದು ಹಾಗೂ ಉಳಿಸಿಕೊಂಡಿರುವುದಾಗಿದೆ.

**ಪ್ರಶ್ನೆ :** *ಹಾಗಾದರೆ ಶ್ರೇಣಿ ವ್ಯವಸ್ಥೆ ಎಂದರೇನು?*

**ಶ್ರೀಮಾತೆ :** ಅದು ಕರ್ತವ್ಯಗಳನ್ನು ಮತ್ತು ಕ್ರಿಯೆಯಲ್ಲಿ ಪ್ರತಿಯೊಬ್ಬನ ಸ್ವಭಾವದ ಅಭಿವ್ಯಕ್ತಿಯನ್ನು ಸಂಘಟಿಸುವುದಾಗಿದೆ.

ನಾವು ಬಹಳಷ್ಟು ಸಲ ಹೋಲಿಕೆಗಳನ್ನು ಕಂಡುಕೊಳ್ಳಲು ಪ್ರಯತ್ನಿಸಿದ್ದೇವೆ, ಆದರೆ ಅವು ನಿಷ್ಪ್ರಯೋಜಕವಾಗಿವೆ, ಏಕೆಂದರೆ ಭೌತಿಕವಾಗಿ ನಾವು ಅರಿತು–ಕೊಂಡಿರುವ ಯಾವುದೇ ವಿಷಯ ಆ ನಿಬಂಧನೆಗೆ ಉತ್ತರ ನೀಡದು. ನೀನು ಹೇಳುತ್ತಿರುವ ಹಾಗೆ ಅಲ್ಲಿ ಯಾವಾಗಲೂ ಉಚ್ಚಮಟ್ಟದಲ್ಲಿರುವುದರ ಇಲ್ಲವೆ ಕೆಳಮಟ್ಟದಲ್ಲಿರುವುದರ ಭಾವನೆ ಇರುತ್ತದೆ. ಉದಾಹರಣೆಗೆ ಶ್ರೇಣಿ ವ್ಯವಸ್ಥೆಯನ್ನು ಕೆಲವರು ದೇಹದ ಬೇರೆ, ಬೇರೆ ಕಾರ್ಯಗಳ ವ್ಯವಸ್ಥೆಗೆ ಹೋಲಿಸುತ್ತಾರೆ, ಆದರೆ ಅದು ಯಾವಾಗಲೂ ಶಿರ ತುತ್ತತುದಿಯಲ್ಲಿರುವುದರ ಹಾಗೂ ಪಾದಗಳು ಕೆಳಮಟ್ಟದಲ್ಲಿರುವ ಅನಿಸಿಕೆಯನ್ನು ತಂದುಕೊಡುತ್ತದೆ. ಅದೊಂದು ಪೀಡೆ!

**ಪ್ರಶ್ನೆ :** *ಪ್ರತಿಯೊಂದು ಅಂಶ ಏಕಕಾಲಕ್ಕೆ ಭಗವಂತರ್ನೇ ಆಗಿರುವಾಗ ಶ್ರೇಣಿ ವ್ಯವಸ್ಥೆಯ ಬಗ್ಗೆ ನಾವು ಹೇಗೆ ಮಾತನಾಡಬಲ್ಲೆವು?*

**ಶ್ರೀಮಾತೆ :** ಪ್ರತಿಯೊಂದು ಅಂಶಕ್ಕೆ ಭಗವಂತನೊಡನೆ ನೇರ ಹಾಗೂ ಪರಿಪೂರ್ಣ ಸಂಬಂಧವಿದೆ.

**ಪ್ರಶ್ನೆ :** *ಆದರೆ ಅವು ಇಡಿಯಾಗಿ ಭಗವಂತನಾಗಲು ಸಾಧ್ಯವಿಲ್ಲವೆ?*


**ಶ್ರೀಮಾತೆ :** ಹೌದು ಪ್ರತಿಯೊಂದು ಭಗವಂತನಾಗುತ್ತದೆ, ಆದರೆ ಇಡಿಯ ರೂಪದ ಭಗವಂತನಾಗುವುದಿಲ್ಲ. ನೀವು ಭಗವಂತನ ಒಂದು ತುಂಡನ್ನು ತೆಗೆದುಕೊಂಡು "ಇದು ಭಗವಂತ" ಎಂದು ಹೇಳಲು ಶಕ್ಯವಿಲ್ಲ ಮತ್ತು ಆದಾಗ್ಯೂ ತನ್ನ ಆಧ್ಯಾತ್ಮಿಕ ಪ್ರಜ್ಞೆಯಲ್ಲಿ ಪ್ರತಿಯೊಬ್ಬನಿಗೆ ಭಗವಂತನೊಡನೆ ಪರಿಪೂರ್ಣ ಸಂಬಂಧವಿರುತ್ತದೆ, ಅಂದರೆ ತಾನು ಆಗಲು ಸಾಧ್ಯವಿರುವಷ್ಟು ಪ್ರತಿಯೊಬ್ಬನೂ ಭಗವಂತನಾಗಿರುತ್ತಾನೆ, ಆದರೆ ಭಗವಂತನನ್ನು ಪುನರ್ರಚಿಸಲು ಭಗವಂತನ ಎಲ್ಲ ಭಾಗದ ಆವಶ್ಯಕತೆಯಿದೆ. ಮತ್ತು ನಿಖರವಾಗಿ ಇದೇ ಸಾರದಲ್ಲಿ ಶ್ರೇಣಿ ವ್ಯವಸ್ಥೆಯ ರಚನೆಯಾಗಿರುತ್ತದೆ.

**ಪ್ರಶ್ನೆ :** *ಶ್ರೀಮಾತೆಯವರೆ, "ಶ್ರೇಣಿ ವ್ಯವಸ್ಥೆಯಲ್ಲಿ ರೂಪುಗೊಂಡ ಗುಂಪು"* ಎಂದು *ನೀವು ಹೇಳಿದ್ದು ನನಗೆ ಅರ್ಥವಾಗಿಲ್ಲ.*

**ಶ್ರೀಮಾತೆ :** "ಶ್ರೇಣಿ ವ್ಯವಸ್ಥೆಗೊಳಪಟ್ಟ ಗುಂಪು" ಇದರ ಅರ್ಥ ನೇತಾರನೊಬ್ಬನನ್ನು ಕೇಂದ್ರದಲ್ಲಿಟ್ಟುಕೊಂಡು ಚಟುವಟಿಕೆಗಳನ್ನು ಮತ್ತು ಕರ್ತವ್ಯಗಳನ್ನು ವ್ಯಕ್ತಿಯ ಅರ್ಹತೆಗೆ ತಕ್ಕಂತೆ ವಹಿಸಿಕೊಟ್ಟು ಸಂಘಟಿತವಾದ ಗುಂಪು ಎಂದಾಗುತ್ತದೆ. ಸೈನ್ಯದ ಸಂಘಟನೆ ಶ್ರೇಣಿ ವ್ಯವಸ್ಥೆಯಿರುವ ಗುಂಪಿನ ಉದಾಹರಣೆಯಾಗಿರುತ್ತದೆ.

ಪ್ರಾಚೀನ ಸಾಂಪ್ರದಾಯಿಕ ಶ್ರೇಣಿ ವ್ಯವಸ್ಥೆಗೆ ಸಂಬಂಧಿಸಿದ ಚಿತ್ರ ಹೀಗಿದೆ.

1–4–8–16
and so on



The Mother, 16: 329

**–ಶ್ರೀಮಾತೆ**

*



(13–158) ಪ್ರತಿಯೊಬ್ಬ ಮನುಷ್ಯ ಯಾವುದು ತನಗೆ ಅತ್ಯಂತ ಒಳ್ಳೆಯದೆಂದು ಯೋಚಿಸುತ್ತಾನೋ ಅದನ್ನು ಕೈಕೊಳ್ಳುತ್ತ ಹೋದರೆ ಇಡೀ ಸಂಘಟನೆ ಅಸ್ತವ್ಯಸ್ತತೆಯಲ್ಲಿ ಕೊನೆಗೊಳ್ಳುತ್ತದೆ.

**–ಶ್ರೀಮಾತೆ**

*

## ಬಾಹ್ಯ ಹಾಗೂ ಆಂತರಿಕ ಶಿಸ್ತುಪಾಲನೆ ಮತ್ತು ಸಂಘಟನೆ

(16/123–24) ಬಾಹ್ಯ ಹಾಗೂ ಆಂತರಿಕ ಶಿಸ್ತುಪಾಲನೆಯಿಲ್ಲದೆ ಮನುಷ್ಯ ಆಧ್ಯಾತ್ಮಿಕವಾಗಿಯಾಗಲಿ ಇಲ್ಲವೆ ಪ್ರಾಪಂಚಿಕವಾಗಿಯಾಗಲಿ ಏನನ್ನೂ ಸಿದ್ಧಿಸಿ–ಕೊಳ್ಳಲಾರ. ಸುಂದರವಾದ ಹಾಗೂ ಪ್ರಯೋಜನಕಾರಿಯಾದ ಏನನ್ನೋ ಸೃಷ್ಟಿಸಲು ಶಕ್ತರಾದ ಜನರು ಯಾವಾಗಲೂ ತಮ್ಮನ್ನು ಶಿಸ್ತುಪಾಲನೆಗೆ ಹೇಗೆ ಒಳಪಡಿಸಿಕೊಳ್ಳಬೇಕು ಎಂಬುದನ್ನು ತಿಳಿದುಕೊಂಡವರಾಗಿದ್ದರು.

**–ಶ್ರೀಮಾತೆ**

*

(13/168) ಶಿಸ್ತುಪಾಲನೆಯಿಲ್ಲದೆ ಯಾವ ಕಾರ್ಯವನ್ನೂ ಸರಿಯಾಗಿ ಮಾಡಲು ಸಾಧ್ಯವಾಗುವುದಿಲ್ಲ. ಶಿಸ್ತುಪಾಲನೆಯಿಲ್ಲದೆ ಜೀವನವನ್ನು ಸರಿಯಾಗಿ ನಡೆಸಲು ಸಾಧ್ಯವಾಗುವುದಿಲ್ಲ.

**–ಶ್ರೀಮಾತೆ**

*

(13/204) ಶಿಸ್ತುಪಾಲನೆಯಿಲ್ಲದೆ ಯಾವ ಭವ್ಯ ಸೃಷ್ಟಿಯನ್ನೂ ಮಾಡಲಾಗು–ವುದಿಲ್ಲ, ಭಗವಂತನನ್ನು ಲಕ್ಷ್ಯದಲ್ಲಿರಿಸಿಕೊಂಡು ವೈಯಕ್ತಿಕ ಹಾಗೂ ಸಾಮೂಹಿಕ ಶಿಸ್ತುಪಾಲನೆ ಇರಬೇಕು.

**–ಶ್ರೀಮಾತೆ**

*

(14/327) ಕಾರ್ಯದಲ್ಲಿ ವ್ಯವಸ್ಥಿತ ಕ್ರಮ ಮತ್ತು ಸಾಮರಸ್ಯ ಇರಬೇಕು. ತೋರಿಕೆಗೆ ಅತಿ ಕ್ಷುಲ್ಲಕವೆನಿಸುವ ಕಾರ್ಯದಲ್ಲಿ ಕೂಡ ಪರಿಪೂರ್ಣತೆ, ನಿರ್ಮಲತೆ, ಸೌಂದರ್ಯ, ಸಾಮರಸ್ಯ ಇವೆಲ್ಲವುಗಳ ಭಾವವನ್ನಿರಿಸಿಕೊಂಡಿರಬೇಕು.

**–ಶ್ರೀಮಾತೆ**

*

(14/327) ಎಲ್ಲ ಗಂಭೀರ ಸಾಧನೆಗೆ ಕ್ರಮಬದ್ಧತೆ ಅತ್ಯಗತ್ಯ.

**–ಶ್ರೀಮಾತೆ**

*

(2/193) ಪ್ರಸಿದ್ಧ ಜೆನೋಯಿಸ್ (Genoese) ನಾವಿಕ ಕೋಲಂಬಸ್ ಸ್ಪೇನ ದೇಶದಿಂದ ಪಶ್ಚಿಮ ದಿಕ್ಕಿನಲ್ಲಿ ಅಪರಿಚಿತ ಸಮುದ್ರಗಳನ್ನು ದಾಟಿ ಹೋಗಲು ಹಡಗನ್ನೇರಿ ಹೋದ.

ದಿನಗಳು, ವಾರಗಳು ಕಳೆದು ಹೋಗುತ್ತಿದ್ದವು, ಅವನ ಸಂಗಡಿಗರು ಗೊಣ–ಗುತ್ತಿದ್ದರು. ಆದಾಗ್ಯೂ ಅವನು ಹೊಸ ಭೂಪ್ರದೇಶವನ್ನು ಕಂಡುಹಿಡಿಯುವು–ದಕ್ಕಾಗಿ, ಅದೆಷ್ಟೇ ವಿಳಂಬವಾದರೂ, ತೊಂದರೆಗಳು ಎದುರಾದರೂ ತನ್ನ ಸಂಕಲ್ಪದಲ್ಲಿ ಪಟ್ಟು ಹಿಡಿದು ಸಾಗಿಹೋದ. ಅಮೇರಿಕದ ಮೊದಲ ದ್ವೀಪವನ್ನು ತಲುಪುವವರೆಗೆ ತನ್ನ ಪ್ರಯತ್ನವನ್ನು ಬಿಟ್ಟುಕೊಡಲಿಲ್ಲ. ಹೀಗೆ ಅವನು ಹೊಸ ಜಗತ್ತನ್ನು ಶೋಧಿಸಿದ.

ಅವನು ತನ್ನ ಸಂಗಡಿಗರಿಂದ ಬಯಸುತ್ತಿದ್ದುದೇನು? ತಾಳ್ಮೆಯಿಂದಿರಲು ಅವರನ್ನು ಕೇಳಿಕೊಂಡ, ಏಕೆಂದರೆ ಅವರು ಅವನ ಮೇಲೆ ಭರವಸೆ ಇಟ್ಟುಕೊಳ್ಳ–ಬೇಕಾಗಿತ್ತು, ಮತ್ತು ಅವನು ಅವರನ್ನು ಶಾಂತರೀತಿಯಿಂದ ಮುನ್ನಡೆಸಿಕೊಂಡು ಹೋಗಬೇಕಾಗಿತ್ತು. ಆದರೆ ಗುರಿಯನ್ನು ತಲುಪಲು ಅವನಿಗೇ ಸ್ವತಃ ಏನು ಬೇಕಾಗಿತ್ತು? ಚೈತನ್ಯವನ್ನು ಪೋಷಿಸಿಕೊಂಡು ಬರುವುದು ಮತ್ತು ಕುಂಠಿತವಾಗದ ಸಂಕಲ್ಪ ಬೇಕಾಗಿದ್ದವು. ಈ ಗುಣಗಳನ್ನು ಹೊಂದಿರುವುದನ್ನೇ ನಾವು ಪಟ್ಟು–ಹಿಡಿಯುವಿಕೆ ಎಂದು ಕರೆಯುತ್ತೇವೆ.

**–ಶ್ರೀಮಾತೆ**

*

(7/244) ಮಾಡಬೇಕಾದದ್ದು ಏನು ಎಂಬುದರ ಬಗ್ಗೆ ಸ್ಪಷ್ಟ ಹಾಗೂ ನಿಖರವಾದ ದೃಷ್ಟಿಯಿರುವುದು ಮತ್ತು ಅದನ್ನು ಕೈಕೊಳ್ಳುವುದಕ್ಕೆ ಏಕಪ್ರಕಾರದ, ಸ್ಥಿರ ಹಾಗೂ ದೃಢ ಸಂಕಲ್ಪವಿರುವುದು ಇವು ಸಂಘಟನೆಯೊಂದು ಸರಿಯಾಗಿ ನಡೆದುಕೊಂಡು ಹೋಗುವುದಕ್ಕೆ ಅವಶ್ಯವಾದ ನಿಬಂಧನೆಗಳು. ಸರ್ವಸಾಧಾರಣ ನಿಯಮವೆಂದಾಗಿ ನಿಮ್ಮಲ್ಲೇ ಇರದ ಸದ್ಗುಣಗಳು ಇತರರಲ್ಲಿ ಇರಲೆಂದು ಅಪೇಕ್ಷೆ ಪಡಬಾರದು.

**–ಶ್ರೀಮಾತೆ**

*



(15/59) ಎಲ್ಲ ಸಂಘಟನಾಕಾರರಿಗೆ ಕಲ್ಪನೆ ಅವಶ್ಯವಾದದ್ದು, ಆ ಸಂಘಟನೆಯ ಗುಣಮಟ್ಟ ಆ ಕಲ್ಪನೆಯ ಗುಣಮಟ್ಟದ ಮೇಲೆ ಅವಲಂಬಿಸಿರುತ್ತದೆ.

**–ಶ್ರೀಮಾತೆ**

*

(15/84) ಪ್ರಗತಿಪರವಾಗಿರದೆ ಇದ್ದ ಸಂಘಟನೆ ಉಳಿದುಕೊಳ್ಳಲಾರದು.

ನಿಜವಾದ ಪ್ರಗತಿ ಯಾವಾಗಲೂ ಭಗವಂತನಿಗೆ ಹತ್ತಿರವಾಗುವಂತೆ ಸಾಗಿ ಹೋಗುವುದಾಗಿದೆ.

ಕಳೆದು ಹೋದ ಪ್ರತಿಯೊಂದು ವರ್ಷ ಹೊಸ ಪರಿಪೂರ್ಣತೆಯೆಡೆಗೆ ಪ್ರಗತಿ ಸಾಧಿಸಿದ್ದನ್ನು ಗುರುತಿಸುವಂತಾಗಬೇಕು. **–ಶ್ರೀಮಾತೆ**

*

(17/87) ವ್ಯವಸ್ಥೆ ಕಲ್ಪಿಸುವುದು ಅತ್ಯಗತ್ಯ. ಆದರೆ ವ್ಯವಸ್ಥೆಯನ್ನು ರೂಪಿಸುವಾಗ ಹಾಗೂ ಅದನ್ನು ಗಟ್ಟಿಯಾಗಿ ಹಿಡಿದಿಟ್ಟುಕೊಳ್ಳುವಾಗ ಒಂದು ಸತ್ಯವನ್ನು ದೃಢವಾಗಿ ನೆನಪಿಡಬೇಕು, ಅದೆಂದರೆ ಎಲ್ಲ ವ್ಯವಸ್ಥೆಗಳು ಅವುಗಳ ಸ್ವರೂಪದಲ್ಲಿ ತಾತ್ಕಾಲಿಕ ಹಾಗೂ ಅಸಂಪೂರ್ಣವಾದವುಗಳು ಎಂಬುದಾಗಿದೆ.

**–ಶ್ರೀ ಅರವಿಂದರು**

*

## ಮಾನವೀಯ ಸಂಬಂಧಗಳು

(13/174) ತಮ್ಮ ಜೀವನ ನಿರ್ವಹಣೆಗಾಗಿ ನಿಮ್ಮ ಮೇಲೆ ಅವಲಂಬಿಸಿದವ–ರೊಂದಿಗೆ ನೀವು ಬಹಳ ಮೃದು ಸ್ವಭಾವದಿಂದ ವರ್ತಿಸಬೇಕು. ನೀವು ಅವರನ್ನು ಕೆಟ್ಟದಾಗಿ ನಡೆಸಿಕೊಂಡರೆ ಅವರು ಮನಸ್ಸಿಗೆ ತಾಪ ಮಾಡಿಕೊಳ್ಳುತ್ತಾರೆ, ಆದರೆ ಮನುಷ್ಯರು ಬೇರೆ ಮನುಷ್ಯರೊಂದಿಗೆ ವ್ಯವಹರಿಸುವಂತೆ ಅವರು ಉತ್ತರ ನೀಡಲಾರರು, ಏಕೆಂದರೆ ಅವರಿಗೆ ತಮ್ಮ ಕೆಲಸ ಕಳೆದುಕೊಳ್ಳುವ ಭಯವಿರುತ್ತದೆ.

ನಿಮಗಿಂತ ಉಚ್ಚರಾದವರೊಡನೆ ಒರಟಾಗಿ ನಡೆದುಕೊಳ್ಳುವುದರಲ್ಲಿ ಸ್ವಲ್ಪ ಗೌರವ ಕಾಯ್ದುಕೊಳ್ಳುವ ಭಾವವಿರಬಹುದು, ಆದರೆ ನಿಮ್ಮ ಮೇಲೆ ಅವಲಂಬಿಸಿ–ದವರೊಂದಿಗೆ ಸೌಜನ್ಯಶೀಲತೆಯಿಂದ ವರ್ತಿಸುವುದರಲ್ಲಿ ನಿಜವಾದ ಘನತೆ–ಯಿರುತ್ತದೆ. **–ಶ್ರೀಮಾತೆ**

*

(23/711) ಕೈಕೆಳಗೆ ಕೆಲಸ ಮಾಡುವವರನ್ನು ಸರಿಯಾದ ಮನೋಭಾವದಿಂದ ಶಿಸ್ತಿಗೆ ಒಳಪಡಿಸಬೇಕು ಮತ್ತು ಅವರು ಆ ಶಿಸ್ತನ್ನು ಸರಿಯಾದ ಮನೋಭಾವ–ದಿಂದ ಸ್ವೀಕರಿಸುವಂತಾಗಬೇಕು. ಅವರನ್ನು ನೇರವಾದ ನಡೆವಳಿಕೆಯೊಂದಿಗೆ ವ್ಯವಹರಿಸಲಾಗುತ್ತದೆ ಮತ್ತು ಅವರೊಡನೆ ವ್ಯವಹರಿಸುವವನಲ್ಲಿ ಕೇವಲ ಉಗ್ರತೆ ಮತ್ತು ಕಾರ್ಯನಿರತೆಗಳಿವೆಯಷ್ಟೇ ಅಲ್ಲ, ಆದರೆ ಸಹಾನುಭೂತಿ ಮತ್ತು ಅಂತ–ರ್ದೃಷ್ಟಿಗಳೂ ಇವೆ ಎಂಬ ಭಾವನೆ ಅವರಿಗೆ ಬರಬೇಕು. ಅದು ಪ್ರಾಣಿಕ ಸಮ–ಯೋಚಿತ ನಯ ಮತ್ತು ದೃಢವಾದ, ವಿಸ್ತಾರವಾದ ಪ್ರಾಣಿಕ ಇವು ಇತರರೊಡನೆ ಸರಿಯಾದ ರೀತಿಯಲ್ಲಿ ವ್ಯವಹರಿಸುವುದನ್ನು ಕಂಡುಕೊಳ್ಳುವ ಪ್ರಶ್ನೆಯಾಗಿದೆ.

**–ಶ್ರೀ ಅರವಿಂದರು**

*

(17/138) ವಿಫಲತೆಯನ್ನು ಮತ್ತು ಅಪರಿಪೂರ್ಣತೆಯನ್ನು ನಿಂದಿಸುವವನು ಭಗವಂತನನ್ನು ನಿಂದಿಸುತ್ತಾನೆ, ಅವನು ತನ್ನ ಆತ್ಮವನ್ನು ಸೀಮಿತಗೊಳಿಸುತ್ತಾನೆ, ತನ್ನ ದೃಷ್ಟಿ ಮೋಸಹೋಗುವಂತೆ ಮಾಡುತ್ತಾನೆ. ನಿಂದಿಸುವುದು ಬೇಡ, ಆದರೆ ಪ್ರಕೃತಿಯನ್ನು ಅವಲೋಕಿಸಿರಿ, ನಿಮ್ಮ ಸಹೋದರರಿಗೆ ಸಹಾಯ ಮಾಡಿರಿ, ಅವರನ್ನು ಗುಣಪಡಿಸಿರಿ, ಮತ್ತು ಸಹಾನುಭೂತಿಯ ಮೂಲಕ ಅವರ ಕ್ಷಮತೆ–ಗಳನ್ನು ಮತ್ತು ಧೈರ್ಯವನ್ನು ಬಲಪಡಿಸಿರಿ.

**–ಶ್ರೀ ಅರವಿಂದರು**

*

(16/216) ನಾನು ಕ್ಷಮಿಸುತ್ತಿದ್ದೇನೆಂಬ ಭಾವನೆ ನನಗೆ ಎಂದೂ ಬರುವುದಿಲ್ಲ. ಪ್ರೇಮದ ಕಾರ್ಯ ಕ್ಷಮಿಸುವುದಾಗಿರುವುದಿಲ್ಲ, ಅದು ಅರ್ಥ ಮಾಡಿಕೊಳ್ಳುವು–ದಾಗಿರುತ್ತದೆ, ವಾಸಿ ಮಾಡುವುದಾಗಿರುತ್ತದೆ.

**–ಶ್ರೀಮಾತೆ**

*

(17/86) ನಿನ್ನನ್ನು ನೀನೇ ಪರೀಕ್ಷಿಸಿಕೊಳ್ಳುವಾಗ ಕನಿಕರ ಬೇಡ, ಆಗ ನೀನು ಇತರರಿಗೆ ಹೆಚ್ಚು ಉದಾರ ಬುದ್ಧಿಯುಳ್ಳವನು ಮತ್ತು ಕರುಣಾಪೂರ್ಣನೂ ಆಗುವಿ.

**–ಶ್ರೀಮಾತೆ**

*



(16/391) ಜನರಿಗೆ ಸಹಾಯ ಮಾಡಿರಿ, ಆದರೆ ಅವರ ಚೈತನ್ಯ ಉಡುಗಿ ಹೋಗುವಂತೆ ಮಾಡಬೇಡಿರಿ, ಅವರನ್ನು ಮುಂದುವರಿಸಿಕೊಂಡು ಹೋಗಿರಿ, ಅವರಿಗೆ ತಿಳಿಸಿಕೊಡಿರಿ, ಆದರೆ ಆರಂಭ ಮಾಡುವ ಅವರ ಹಕ್ಕು ಮತ್ತು ಸ್ವಂತಿಕೆ ಕುಂದಿಲ್ಲದೆ ಹಾಗೆ ಉಳಿದುಕೊಳ್ಳುವಂತೆ ನೋಡಿಕೊಳ್ಳಿರಿ. ಇತರರನ್ನು ನಿಮ್ಮಲ್ಲಿಯೇ ತೆಗೆದುಕೊಳ್ಳಿರಿ, ಆದರೆ ಪ್ರತಿಯಾಗಿ ಅವರ ಸ್ವಭಾವದ ದೈವತ್ವವನ್ನು ಅವರಿಗೆ ಮರಳಿಕೊಡಿರಿ. ಇದನ್ನು ಮಾಡಬಲ್ಲವನು ನೇತಾರ ಇಲ್ಲವೆ ಗುರು.

**–ಶ್ರೀ ಅರವಿಂದರು**

*

(14/287) ನಿಮ್ಮದೇ ಆದ ವಿಚಾರಗಳೊಂದಿಗೆ ಸಾಮರಸ್ಯದಲ್ಲಿರದೇ ಇರುವ, ನಿಮ್ಮ ಅಭಿಪ್ರಾಯ ಹಾಗೂ ಕಾರ್ಯಮಾಡುವ ರೀತಿ ಇವುಗಳಿಗೆ ಅನುರೂಪ–ವಾಗಿರದೆ ಇರುವ ಇನ್ನೊಬ್ಬನೊಂದಿಗೆ ಸಾಮರಸ್ಯದಿಂದಿರಲು ಸಾಧ್ಯವಾಗುವುದಿಲ್ಲ ಎಂಬ ವಾಸ್ತವತೆಯಿಂದಾಗಿ ಎಲ್ಲ ತೊಂದರೆ ಉಂಟಾಗುತ್ತದೆ.

ನಿಮ್ಮ ಪ್ರಜ್ಞೆಯನ್ನು ವಿಸ್ತರಿಸಿಕೊಳ್ಳಬೇಕು ಮತ್ತು ಪ್ರತಿಯೊಬ್ಬನಿಗೆ ಅವನದೇ ನಿಯಮವಿರುತ್ತದೆ ಎಂಬುದನ್ನು ತಿಳಿದುಕೊಳ್ಳಬೇಕು. ವೈಯಕ್ತಿಕ ಸಂಕಲ್ಪಗಳೊಡನೆ ಸಂತೋಷಕರ ಸಂಯೋಜನೆ ಮಾಡಿಕೊಳ್ಳುವ ನೆಲೆ ಕಂಡುಕೊಳ್ಳುವುದು, ಸಂಕಲ್ಪದಲ್ಲಿ ಮತ್ತು ಕ್ರಿಯೆಯಲ್ಲಿ ಎಲ್ಲರೂ ಒಂದೇ ಬಗೆಯವರಾಗಲಿ ಎಂದು ಪ್ರಯತ್ನಿಸದೆ ಇರುವುದು ಅವಶ್ಯವಾಗಿದೆ. **–ಶ್ರೀಮಾತೆ**

*

(24/1557–58) ಟೀಕೆ ಮಾಡುವ ರೂಢಿ – ಹೆಚ್ಚಾಗಿ ಇತರರ ಬಗ್ಗೆ ಅಜ್ಞಾನದಿಂದ ಕೂಡಿದ ಟೀಕೆ – ಎಲ್ಲ ಬಗೆಯ ಕಲ್ಪನೆಗಳು, ತೀರ್ಮಾನಗಳು, ಅತಿಶಯೋಕ್ತಿಗಳು ಮಿಥ್ಯೆಯಿಂದ ಕೂಡಿದ ವ್ಯಾಖ್ಯಾನ, ಒರಟಾದ ಸುಳ್ಳುಕತೆಗಳು ಇವೆಲ್ಲವುಗಳಿಂದ ಕೂಡಿದ ಟೀಕೆ ಮಾಡುವ ರೂಢಿ ವಿಶ್ವಂಭರ ರೋಗಗಳಲ್ಲಿ ಒಂದು ರೋಗ. ಅದು ಭೌತಿಕ ಮನಸ್ಸಿನ ಸಹಾಯ ಪಡೆದ ಪ್ರಾಣಿಕಕ್ಕೆ ಉಂಟಾಗುವ ರೋಗ. ಪ್ರಾಣಿಕದ ಈ ಬಗೆಯ ಬರಡು ಮತ್ತು ಹಾನಿಕಾರಕ ಹವ್ಯಾಸದಲ್ಲಿ ಭೌತಿಕ ಮನಸ್ಸು ಉಪಕರಣವಾಗುತ್ತದೆ. ಆಂತರಿಕ ಅನುಭವ ಬಾಹ್ಯ ಜೀವನದ ಮೇಲೆ ಪರಿಣಾಮವನ್ನುಂಟು ಮಾಡಬೇಕೆಂದಿದ್ದರೆ ಈ ರೋಗವನ್ನು ತಿರಸ್ಕರಿಸುವುದು, ಮಾತಿನ ಮೇಲೆ, ಪ್ರಾಣಿಕದ ತುಡಿಕೆಯ ಮೇಲೆ ನಿಯಂತ್ರಣ ಬಹಳ ಅವಶ್ಯವಾಗಿವೆ.

**–ಶ್ರೀ ಅರವಿಂದರು**

*

## ಸರಿಯಾದ ಮನೋಭಾವ

(3/155) ಸರಿಯಾದ ಮನೋಭಾವವಿದ್ದ ಹಲವು ಜನರ ಉದಾಹರಣೆಗಳು ನನ್ನ ಬಳಿ ಇವೆ. ಸರಿಯಾದ ಮನೋಭಾವವಿದ್ದ ಒಬ್ಬ ವ್ಯಕ್ತಿ ಜನಸಮೂಹವನ್ನು ಅನಾಹುತದಿಂದ ಪಾರು ಮಾಡಿದ್ದುಂಟು. ಆದರೆ ಆ ಮನೋಭಾವ ಮೇಲ್ಗಡೆ ಬಹಳ ಉಚ್ಚ ಮಟ್ಟದಲ್ಲಿ ಉಳಿದುಕೊಳ್ಳುವಂತಹದು, ದೇಹವನ್ನು ಅದರ ಸಾಮಾನ್ಯ ಪ್ರತಿಕ್ರಿಯೆಗಳಿಗೆ ಬಿಟ್ಟು ಕೊಡುವಂತಹದು ಆಗಿರಬಾರದು, ನೀವು ಅಷ್ಟೊಂದು ಮೇಲಿದ್ದುಕೊಂಡು "ಭಗವಂತನ ಸಂಕಲ್ಪವಿದ್ದಂತಾಗಲಿ" ಎಂದು ಹೇಳಿಕೊಳ್ಳುತ್ತ ಉಳಿದುಕೊಂಡರೆ ಕೊಲೆಗೀಡಾಗುವ ಸಂಭವವೂ ಇರುತ್ತದೆ, ಏಕೆಂದರೆ ನಿಮ್ಮ ದೇಹ ಬಹಳ ಅದೈವಿಕವಾಗಿರಬಹುದು, ಭಯದಿಂದ ನಡುಗುತ್ತಿರಬಹುದು, ಮಾಡಬೇಕಾದ ಕಾರ್ಯವೆಂದರೆ ದೇಹದಲ್ಲಿಯೇ ನಿಜವಾದ ಪ್ರಜ್ಞೆಯನ್ನು ಹಿಡಿದಿಟ್ಟುಕೊಳ್ಳಬೇಕು, ಕನಿಷ್ಠಮಟ್ಟದ ಭಯವೂ ಇರಬಾರದು, ದೈವೀ ಶಾಂತಿಯಿಂದ ತುಂಬಿಕೊಂಡಿರಬೇಕು.

**– ಶ್ರೀಮಾತೆ**

*

(15/239) ಎಲ್ಲವೂ ಪ್ರತಿಯೊಬ್ಬನ ಮನೋಭಾವದ ಮೇಲೆ ಹಾಗೂ ಅದರ ಹತ್ತಿರ ಸಾಗುವಾಗ ಇರುವ ಅವನ ನಿಷ್ಕಾಪಟ್ಯದ ಮೇಲೆ ಅವಲಂಬಿಸಿರುತ್ತದೆ.

**– ಶ್ರೀಮಾತೆ**

*

(14/37) ಮನುಷ್ಯ ಏನೇ ಕೈಕೊಳ್ಳಲಿ, ಅದರಲ್ಲಿ ಅವನು ನಿಜವಾದ ಪ್ರಜ್ಞೆಯ ಕಿಡಿಯನ್ನು ಹಾಕಿದಾಗ, ಕೈಕೊಂಡದ್ದು ಉಪಯುಕ್ತವಾಗುತ್ತದೆ.

ಮನುಷ್ಯ ನಡೆಸಿಕೊಡುವ ಕಾರ್ಯಕ್ಕಿಂತ ಅವನಲ್ಲಿರುವ ಪ್ರಜ್ಞೆ ಹೆಚ್ಚು ಮಹತ್ವದ್ದಾಗಿರುತ್ತದೆ ಮತ್ತು ತೋರಿಕೆಗೆ ಅತ್ಯಂತ ನಿರುಪಯುಕ್ತವೆನಿಸುವ ಕ್ರಿಯೆ–ಗಳೂ ಕೂಡ, ಅವುಗಳನ್ನು ನಿಜವಾದ ಪ್ರಜ್ಞೆಯಿಂದ ಕೈಕೊಂಡಾಗ ಬಹಳ ಉತ್ಪಾದಕವಾಗಬಲ್ಲವು.

**– ಶ್ರೀಮಾತೆ**

*



(3/198) ನೀವು ನಿಮ್ಮೊಡನೆ, ನಿಮ್ಮ ಸುತ್ತಲೂ, ನಿಮ್ಮಲ್ಲಿ ನಿಮ್ಮ ಕ್ರಿಯೆಗಳಿಂದ ಉಂಟಾಗುವ ವಾತಾವರಣವನ್ನು ಕೊಂಡೊಯ್ಯುತ್ತೀರಿ ಮತ್ತು ನೀವು ಮಾಡು–ತ್ತಿರುವುದು ಸುಂದರ, ಒಳ್ಳೆಯದು ಮತ್ತು ಸಾಮರಸ್ಯದ್ದು ಆಗಿದ್ದರೆ ನಿಮ್ಮ ವಾತಾ–ವರಣ ಸುಂದರವಾಗಿರುತ್ತದೆ, ಒಳ್ಳೆಯದಾಗಿರುತ್ತದೆ, ಸಾಮರಸ್ಯದಿಂದ ಕೂಡಿರು–ತ್ತದೆ. ಇನ್ನೊಂದೆಡೆಗೆ ನೀವು ಜಿಪುಣತನದ ಸ್ವಾರ್ಥಪರತೆಯಲ್ಲಿ, ನಿರ್ಲಜ್ಜತನದ ಸ್ವ–ಹಿತಾಸಕ್ತಿಯಲ್ಲಿ, ನಿಷ್ಕರುಣೆಯ ಕೆಟ್ಟ ಸಂಕಲ್ಪದಲ್ಲಿ ಜೀವಿಸುತ್ತಿದ್ದರೆ ಅದನ್ನೇ ನೀವು ಪ್ರತಿಯೊಂದು ಕ್ಷಣ ಉಸಿರಾಡಿಸುತ್ತೀರಿ ಮತ್ತು ಅದರರ್ಥ ದುಸ್ಥಿತಿ, ಸತತ ಇರುವ ತಳಮಳ, ತನ್ನದೇ ಕುರೂಪ ಕಂಡು ಹತಾಶೆಗೊಳಗಾಗುವಂತಹ ಕುರೂಪ–ವಿರುವುದು. **– ಶ್ರೀಮಾತೆ**

*

(17/107) ಧೈರ್ಯ ಮತ್ತು ಪ್ರೇಮ ಇವೆರಡು ಮಾತ್ರ ಅತ್ಯಗತ್ಯವಾಗಿ ಇರಬೇಕಾದ ಸದ್ಗುಣಗಳು, ಉಳಿದ ಸದ್ಗುಣಗಳಿಗೆ ಗ್ರಹಣ ಹಿಡಿದಾಗ್ಯೂ ಇವೆರಡು ಸದ್ಗುಣಗಳು ಆತ್ಮ ಜೀವಿಸುವುದಕ್ಕೆ ರಕ್ಷಣೆ ನೀಡಬಲ್ಲವು. **– ಶ್ರೀ ಅರವಿಂದರು**

*

(17/107) ಹೃದಯ ವೈಶಾಲ್ಯ ಹಾಗೂ ಔದಾರ್ಯ ಇವು ಆತ್ಮದ ಅಲೌಕಿಕ ಬಾಂದಳವಿದ್ದಂತೆ, ಅವುಗಳಿಲ್ಲದಿದ್ದಾಗ ಕತ್ತಲು ಕೋಣೆಯಲ್ಲಿ ಹುಳುವೊಂದರತ್ತ ನೋಡುತ್ತಿರುವಂತಿರುತ್ತದೆ. **– ಶ್ರೀ ಅರವಿಂದರು**

*

(17/145) ಜನರನ್ನು ಪ್ರೀತಿಸು, ಆದರೆ ಅವರು ಪ್ರಶಂಸೆ ಮಾಡಲಿ ಎಂದು ಬಯಸುವುದರ ಬಗ್ಗೆ ನೀನು ಎಚ್ಚರದಿಂದಿರು. ಅದಕ್ಕೂ ಹೆಚ್ಚಾಗಿ ನಿನ್ನೊಳಗಿರುವ ದೇವನಿಗೆ ವಿಧೇಯನಾಗಿರು. **– ಶ್ರೀ ಅರವಿಂದರು**

*

(15/298) ಸಹಿಸಿಕೊಳ್ಳುವ ಗುಣ ಹೆಚ್ಚುಗಾರಿಕೆಯ ಭಾವದೊಂದಿಗೆ ಕೂಡಿ–ಕೊಂಡಿರುತ್ತದೆ, ಅದರ ಸ್ಥಾನದಲ್ಲಿ ಇಡಿಯಾಗಿ ಅರ್ಥಮಾಡಿಕೊಳ್ಳುವ ಶಕ್ತಿ–ಯನ್ನಿರಿಸಬೇಕು.

**– ಶ್ರೀ ಅರವಿಂದರು**

*

(14/160) ನಮ್ರನಾಗಿರುವುದರ ಅರ್ಥ ಮನಸ್ಸು, ಪ್ರಾಣಿಕ ಹಾಗೂ ದೇಹ ಇವು ಭಗವಂತನಿಲ್ಲದೆ ಏನನ್ನೂ ತಿಳಿದುಕೊಂಡಿರುವುದಿಲ್ಲ, ಏನೂ ಆಗಿರುವುದಿಲ್ಲ ಮತ್ತು ಅವನಿಲ್ಲದೆ ಏನನ್ನೂ ಮಾಡಲು ಶಕ್ಯವಿಲ್ಲ ಎಂಬುದನ್ನು ಎಂದಿಗೂ ಮರೆಯ–ದಿರುವುದಾಗಿದೆ. ಭಗವಂತನಿಲ್ಲದೆ ಅವು ಕೇವಲ ಅಜ್ಞಾನ, ಅಸ್ತವ್ಯಸ್ತತೆ ಮತ್ತು ಅಸಮರ್ಥತೆಗಳಿಂದ ಕೂಡಿಕೊಂಡಿರುತ್ತವೆ. ಭಗವಂತ ಮಾತ್ರ ದೈವೀ ಸತ್ಯ, ದೈವೀ ಪ್ರಾಣ, ಸಾಮರ್ಥ್ಯ, ದೈವೀ ಪ್ರೇಮ ಹಾಗೂ ಸುಖ–ಸಂತೋಷಗಳ ಮೂಲ–ವಾಗಿರುತ್ತಾನೆ.

ಆ ಕಾರಣದಿಂದಾಗಿ ಮನಸ್ಸು, ಪ್ರಾಣಿಕ ಹಾಗೂ ದೇಹ ಇವು ಭಗವಂತನನ್ನು ಅವನ ಸಾರದಲ್ಲಷ್ಟೇ ಅಲ್ಲ ಆದರೆ ಅವನ ಕ್ರಿಯೆ ಹಾಗೂ ಪ್ರಕಟಣೆಗಳಲ್ಲಿ ಅರ್ಥ ಮಾಡಿಕೊಳ್ಳಲು ಅಸಮರ್ಥವಾಗಿರುತ್ತವೆ ಎಂಬುದನ್ನು ಒಮ್ಮೆ ಮತ್ತು ಎಲ್ಲ ಕಾಲಕ್ಕೆ ಕಲಿತುಕೊಳ್ಳಬೇಕು ಹಾಗೂ ಭಾವನೆಗೆ ತಂದುಕೊಳ್ಳಬೇಕು.

ಇದೊಂದೇ ನಿಜವಾದ ನಮ್ರತೆ ಮತ್ತು ಅದರೊಂದಿಗೆ ಅಚಂಚಲತೆ ಹಾಗೂ ಶಾಂತಿ ಬರುತ್ತವೆ. ಇದು ಎಲ್ಲ ವಿರೋಧೀ ಶಕ್ತಿಗಳ ಆಕ್ರಮಣದ ವಿರುದ್ಧ ಅತಿ ನಿಶ್ಚಿತವಾಗಿ ಇರುವ ರಕ್ಷಾ ಫಲಕವಿದ್ದ ಹಾಗೆ. ವಿರೋಧೀ ಶಕ್ತಿ ಮಾನವನಲ್ಲಿರುವ ಗರ್ವದ ಬಾಗಿಲನ್ನು ತಟ್ಟುತ್ತದೆ, ಏಕೆಂದರೆ ಈ ಬಾಗಿಲು ಮಾತ್ರ ಅದು ಒಳಗೆ ಪ್ರವೇಶಿಸಲು ತೆರೆದುಕೊಂಡಿರುತ್ತದೆ. **– ಶ್ರೀಮಾತೆ**

*

(24/1410) ಕೋಪ ಬರುವುದಕ್ಕೆ ನೀವು ಅನುವು ಮಾಡಿಕೊಟ್ಟರೆ ಅದು ಮತ್ತೆ, ಮತ್ತೆ ಬರುವುದರ ರೂಢಿಯನ್ನು ಮುಂದುವರಿಸುತ್ತೀರಿ ಮತ್ತು ಅದನ್ನು ದೃಢೀಕರಿಸುತ್ತೀರಿ. ಸ್ವಭಾವದಲ್ಲಿಯ ಕೋಪದ ಸಾಮರ್ಥ್ಯವನ್ನು ದುರ್ಬಲ ಗೊಳಿಸುವುದಕ್ಕೆ ಮತ್ತು ನಂತರ ಅದನ್ನು ಒಟ್ಟಿನಲ್ಲಿ ಪೂರ್ತಿ ತೊಡೆದು ಹಾಕಲು ಅದಕ್ಕೆ ಕಾರ್ಯದಲ್ಲಿ ಹಾಗೂ ಮಾತಿನಲ್ಲಿ ಯಾವುದೇ ಬಗೆಯ ಅಭಿವ್ಯಕ್ತಿ ನೀಡುವುದನ್ನು ತಿರಸ್ಕರಿಸಬೇಕು. ನಂತರ ಅದನ್ನು ಯೋಚನೆಯಿಂದ ಮತ್ತು ಭಾವನೆಯಿಂದಲೂ ಕೂಡ ಚೆಲ್ಲಿಕೊಡುವುದರಲ್ಲಿ ಯಶಸ್ಸು ಕಂಡುಕೊಳ್ಳಬಹುದು. ಇದೇ ರೀತಿಯಲ್ಲಿ ಉಳಿದೆಲ್ಲ ತಪ್ಪು ಚಲನೆಗಳೊಂದಿಗೆ ವ್ಯವಹರಿಸಬೇಕು.

**– ಶ್ರೀ ಅರವಿಂದರು**

*



(5/407) ಅಪಾಯ ಒದಗಿದ ಸಂದರ್ಭ ಅಂದರೆ ಅಪಘಾತವೊಂದು ಪ್ರಾರಂಭ ವಾದಾಗಿನ ಇಲ್ಲವೆ ಅಪಘಾತಕ್ಕೀಡಾಗಿ ಅದರಿಂದ ಪಾರಾಗಿ ಬಂದ ಸಂದರ್ಭ ಇಂತಹವುಗಳನ್ನು ಹೊರತುಪಡಿಸಿ ಉಳಿದ ಸಮಯದಲ್ಲಿ ಜನರು ದೈವೀಕೃಪೆಯ ಕಾರ್ಯಗತಿಯ ಬಗ್ಗೆ ಅರಿವು ತಂದುಕೊಳ್ಳುವುದಿಲ್ಲ. ಪ್ರಯಾಣ ಇಲ್ಲವೆ ಅಂತಹದೇ ಏನಾದರೂ ಯಾವ ಅಪಘಾತವಿಲ್ಲದೆ ಸುಸೂತ್ರ ನಡೆದು ಹೋದಾಗ ಅದು ಅನಂತಪಟ್ಟು ಹೆಚ್ಚಿನ ದೈವೀಕೃಪೆಯಿಂದಾದುದು ಎಂದು ಜನರು ಅರಿವಿಗೆ ತಂದುಕೊಳ್ಳುವುದಿಲ್ಲ. ಅಂದರೆ ಸಾಮರಸ್ಯವನ್ನು ಇರಿಸಿದ ರೀತಿ ಎಂತಹ–ದಿರುತ್ತದೆಂದರೆ ಅಪಘಾತದಂತಹದೇನೂ ಸಂಭವಿಸುವುದಿಲ್ಲ, ಆದರೆ ಅದು ಜನರಿಗೆ ಬಹಳ ಸ್ವಾಭಾವಿಕವಾದದ್ದೆನಿಸುತ್ತದೆ. ಅಸ್ವಸ್ಥರಾಗಿ ಬೇಗ ಗುಣಮುಖರಾದ ಜನರು ಕೃತಜ್ಞತೆಯಿಂದ ತುಂಬಿಕೊಂಡಿರುತ್ತಾರೆ, ಆದರೆ ಆರೋಗ್ಯದಿಂದಿದ್ದಾಗ ಕೃತಜ್ಞರಾಗಿರಬೇಕು ಎಂಬುದರ ಬಗ್ಗೆ ಅವರು ಎಂದೂ ಯೋಚಿಸುವುದಿಲ್ಲ, ಆದರೆ ಅದು ಇನ್ನೂ ಹೆಚ್ಚಿನ ಪವಾಡವಾಗಿರುತ್ತದೆ.

**– ಶ್ರೀಮಾತೆ**

*

(28/211) ತಮ್ಮ ಹೃದಯಗಳಲಿ ದೇವನನ್ನಿರಿಸಿಕೊಂಡವರು ಮಾತ್ರ ಸುರಕ್ಷಿತರು
ಧೈರ್ಯವನು ರಕ್ಷಾಕವಚವನ್ನಾಗಿ, ನಂಬುಗೆಯನು ಖಡ್ಗವನ್ನಾಗಿ
ಇರಿಸಿಕೊಂಡು ಅವರು ಹೆಜ್ಜೆಯಿಡಬೇಕು

ಸಿದ್ಧವಿರುವುದವರ ಹಸ್ತ ಏಟುಕೊಡಲು, ಕಣ್ಣು ಶೋಧಿಸಲು
ದೈವೀ ಪ್ರಕಾಶ ಪಡೆದ ವೀರ ಸೈನಿಕರ ಸೈನ್ಯ
ಮುಂಚೂಣಿಯಲಿ ಭರ್ಚಿಯ ನೋಟವನಿರಿಸಿಹುದು.

**– ಶ್ರೀ ಅರವಿಂದರು**

*

## ಬಲವುಳ್ಳ ಸತ್ತೆ ಯಾವಾಗಲೂ ಅಚಂಚಲವಾಗಿರುತ್ತದೆ

(16/125) ಬಲವುಳ್ಳ ಸತ್ತೆ ಯಾವಾಗಲೂ ಅಚಂಚಲವಾಗಿರುತ್ತದೆ. ತಳಮಳಕ್ಕೆ ದೌರ್ಬಲ್ಯ ಕಾರಣವಾಗಿರುತ್ತದೆ.

**– ಶ್ರೀಮಾತೆ**

*

(8/330) ದುರ್ಬಲರು ಕಳವಳಕ್ಕೀಡಾಗಿರುತ್ತಾರೆ. ಮನುಷ್ಯ ನಿಜವಾಗಿ ಬಲವುಳ್ಳವನಾದ ತತ್‌ಕ್ಷಣ ಅವನಲ್ಲಿ ಶಾಂತಿ, ಸ್ಥಿರತೆ ಮತ್ತು ಅಚಂಚಲತೆಗಳಿರುತ್ತವೆ ಮತ್ತು ಅವನನ್ನು ಕ್ಷೋಭೆಗೊಳಿಸುವ ಬಯಕೆಯೊಂದಿಗೆ ಬಾಹ್ಯದಿಂದ ಬರುವ ವಿರೋಧೀ ತರಂಗಗಳನ್ನು ಎದುರಿಸಲು ಅವನಲ್ಲಿ ತಾಳ್ಮೆಯ ಸಾಮರ್ಥ್ಯವಿರುತ್ತದೆ. ಈ ನಿಜವಾದ ಅಚಂಚಲತೆ ಯಾವಾಗಲೂ ಶಕ್ತಿಯ ಕುರುಹಿನ ಹಾಗಿರುತ್ತದೆ. ಸ್ಥಿರತೆಯಿಂದಿರುವುದು ಬಲವುಳ್ಳವರಿಗೆ ಸಾಧ್ಯ.

**– ಶ್ರೀಮಾತೆ**

*

(23/637) ಮನಸ್ಸಿನ ಅಚಂಚಲತೆಯ ಅರ್ಥ ಸಂಪೂರ್ಣವಾಗಿ ನಿಶ್ಚಲನೀರವತೆಯಲ್ಲಿರುವುದು ಎಂದಲ್ಲ. ಆತಂಕ, ಕ್ಷೋಭೆಗಳಿಂದ ಮುಕ್ತವಾಗಿರುವ, ಏಕಪ್ರಕಾರವಾಗಿರುವ, ಹಗುರಾದ, ಸಂತೋಷದಿಂದಿರುವ ಮನಸ್ಸು ಎಂದು ಅದರ ಅರ್ಥ, ಅದರಿಂದಾಗಿ ಸ್ವಭಾವವನ್ನು ಬದಲಿಸುವ ದೈವೀಶಕ್ತಿಗೆ ತೆರೆದಿರಿಸಿಕೊಳ್ಳಲು ಸಾಧ್ಯವಾಗುತ್ತದೆ. ಕ್ಷೋಭೆಗೊಳಪಡಿಸುವ ಯೋಚನೆಗಳು, ತಪ್ಪು ಭಾವನೆಗಳು, ವಿಚಾರಗಳಲ್ಲಿಯ ಗೊಂದಲ, ಅಸಂತೋಷಕರ ಚಲನೆಗಳು ಇಂತಹವೆಲ್ಲದರ ಆಕ್ರಮಣಕ್ಕೊಳಗಾಗುವ ರೂಢಿಯನ್ನು ತೊಡೆದು ಹಾಕುವುದು ಮಹತ್ವದ ವಿಷಯ. ಇವು ಸ್ವಭಾವವನ್ನು ಕ್ಷೋಭೆಗೀಡು ಮಾಡುತ್ತವೆ, ಅದರ ಮೇಲೆ ಮೋಡ ಕವಿಯುವಂತೆ ಮಾಡುತ್ತವೆ, ಅದರಿಂದಾಗಿ ದೈವೀ ಶಕ್ತಿಯ ಕಾರ್ಯ ಕಠಿಣವಾಗುತ್ತದೆ. ಮನಸ್ಸು ಅಚಂಚಲವಾಗಿದ್ದಾಗ, ಶಾಂತಿಯಿಂದಿದ್ದಾಗ ದೈವೀಶಕ್ತಿಗೆ ಕಾರ್ಯಕೈಕೊಳ್ಳುವುದು ಹೆಚ್ಚು ಸುಲಭವಾಗುತ್ತದೆ.

**– ಶ್ರೀಮಾತೆ**

*

(22/477) ಮಾತಿನಲ್ಲಿ ಇಲ್ಲವೆ ಕ್ರಿಯೆಯಲ್ಲಿ ಅಭಿವ್ಯಕ್ತಪಡಿಸಿದಾಗ ಮಾತ್ರ ಒಂದು ಯೋಚನೆ ಅಥವಾ ಸಂಕಲ್ಪ ಪರಿಣಾಮಕಾರಿಯಾಗುತ್ತದೆ ಎಂದು ಯೋಚಿಸುವುದು ತಪ್ಪು. ಮಾತಿನಲ್ಲಿ ವ್ಯಕ್ತಪಡಿಸದ ಯೋಚನೆ, ಅಭಿವ್ಯಕ್ತಪಡಿಸದ ಸಂಕಲ್ಪ ಇವೂ ಕೂಡ ಕ್ರಿಯಾಶೀಲ ಚೈತನ್ಯಗಳಾಗಿವೆ ಮತ್ತು ಅವು ತಮ್ಮದೇ ಕಂಪನಗಳನ್ನು, ಪರಿಣಾಮಗಳನ್ನು ಹಾಗೂ ಪ್ರತಿಕ್ರಿಯೆಗಳನ್ನು ಉತ್ಪಾದಿಸಬಲ್ಲವು.

**– ಶ್ರೀ ಅರವಿಂದರು**

*



(ಶ್ರೀ ಅರವಿಂದರಿಂದ ಮಾರ್ಗದರ್ಶನ : ನಾಗಿನ ದೋಸಿ, p.127)

ನಿಶ್ಚಲ ನೀರವತೆಯೆಂದರೆ ಯೋಚನೆಗಳಿಂದ, ಪ್ರಾಣಿಕ ಚಲನವಲನೆಗಳಿಂದ ಮುಕ್ತವಾಗಿರುವುದು, ಇಡೀ ಪ್ರಜ್ಞೆ ನಿಶ್ಚಲ ನೀರವತೆಯಲ್ಲಿರುವ ಸ್ಥಿತಿ.

*

(23/647) ನಿಶ್ಚಲ ನೀರವತೆಯಿಂದ ಶಾಂತಿ ಬರುತ್ತದೆ, ಶಾಂತಿ ಆಳಾತಿ ಆಳಕ್ಕೆ ಇಳಿದು ಹೋಗುತ್ತಿದ್ದಂತೆ, ಅದು ಹೆಚ್ಚು ಹೆಚ್ಚಾಗಿ ದೈವೀ ನಿಶ್ಚಲನೀರವತೆಯಾಗುತ್ತದೆ.

ಹೆಚ್ಚು ಬಾಹ್ಯಾರ್ಥವಿರುವ ರೀತಿಯಲ್ಲಿ ನಿಶ್ಚಲನೀರವತೆ ಶಬ್ದವನ್ನು ಯೋಚನೆಯ ಇಲ್ಲವೆ ಭಾವನೆಯ ಇತ್ಯಾದಿಗಳ ಚಲನೆಯಿಲ್ಲದ ಸ್ಥಿತಿಗೆ ಅನ್ವಯಿಸಲಾಗುತ್ತದೆ, ಅದು ಕೇವಲ ಅಚಲವಾಗಿರುವ ಮನಸ್ಸಿನ ಶ್ರೇಷ್ಠ ಸ್ಥಿತಿಯಾಗಿರುತ್ತದೆ.

ಆದರೆ ಆ ದೈವೀ ನಿಶ್ಚಲ ನೀರವತೆಯಲ್ಲಿ ಕರ್ಮ ನಡೆದು ಹೋಗುವ ಸಾಧ್ಯತೆ ಇದೆ, ಅದು ವಿಶ್ವವ್ಯಾಪಿ ದೈವೀ ನಿಶ್ಚಲ ನೀರವತೆಯಲ್ಲಿ ವಿಶ್ವಂಭರ ಕ್ರಿಯೆ ನಡೆಯುತ್ತಿರುವ ರೀತಿಯದಾಗಿರುತ್ತದೆ. **– ಶ್ರೀ ಅರವಿಂದರು**

*

(1/10) ದೈವೀ ಶಾಂತಿ ಹಾಗೂ ನಿಶ್ಚಲನೀರವತೆಗಳಿರುವಲ್ಲಿ ಸನಾತನನು ಪ್ರಕಟನಾಗುತ್ತಾನೆ, ನಿಮ್ಮನ್ನು ಕ್ಷೋಭೆಗೊಳಪಡಿಸಲು ಯಾವುದಕ್ಕೂ ಅನುವು ಮಾಡಿಕೊಡಬೇಡಿರಿ, ಸನಾತನನು ಪ್ರಕಟನಾಗುವನು. **– ಶ್ರೀಮಾತೆ**

*

(16/386) ನಮ್ಮ ಕ್ರಿಯಾಶೀಲ ಸತ್ತೆಯ ಹಾಗೂ ಅದರ ಉಪಕರಣಗಳ ತಳಮಳ ಮತ್ತು ಅಲ್ಪಕಾಲದಲ್ಲಿ ದಣಿದುಕೊಳ್ಳುವಿಕೆ ಇವು ಸ್ಥಿರತೆ ನಮ್ಮ ತಳಹದಿಯೆಂದು ಮತ್ತು ಉದ್ರೇಕಗೊಳ್ಳುವುದು ಆತ್ಮಕ್ಕೆ ತಗುಲಿದ ರೋಗವೆಂದು ತೋರಿಸಿಕೊಡುವ ಪ್ರಕೃತಿಯ ಕುರುಹುಗಳು, ಕೇವಲ ಸ್ಥಿರತೆಯಲ್ಲಿ ಉಳಿದುಕೊಳ್ಳುವುದರ ಬಂಜರುತನ ಹಾಗೂ ಏಕತಾನತೆ ಇವು ಆ ಸ್ಥಿರ ತಳಹದಿಯ ಮೇಲೆ ಚಟುವಟಿಕೆಗಳ ಕ್ರೀಡೆ ನಡೆಯಲೆಂದು ಬೇಡುವ ಪ್ರಕೃತಿಯ ಸೂಚನೆಗಳಾಗಿರುತ್ತವೆ. ಭಗವಂತ ನಿರಂತರ ಲೀಲೆಯಲ್ಲಿ ತೊಡಗಿರುತ್ತಾನೆ ಮತ್ತು ಅವನು ಕ್ಷೋಭೆಗೊಳಗಾಗುವುದಿಲ್ಲ.

**– ಶ್ರೀ ಅರವಿಂದರು**

*

(20/350) ನಮ್ಮ ಸ್ವಭಾವ ಗೊಂದಲ ಮತ್ತು ತಳಮಳ ಇವುಗಳ ಆಧಾರದ ಮೇಲೆ ಕಾರ್ಯ ಕೈಕೊಳ್ಳುತ್ತದೆ. ಭಗವಂತ ಆಳವನರಿಯದ ಸ್ಥಿರತೆಯಿಂದ, ನಿರ್ಬಂಧರಹಿತನಾಗಿ ಕಾರ್ಯ ಕೈಕೊಳ್ಳುತ್ತಾನೆ. ನಾವು ಈ ನಿಮ್ನ ಸ್ವಭಾವದ ಹಿಡಿತವನ್ನು ನಿರ್ಮೂಲಗೊಳಿಸಬೇಕಾದರೆ, ಪ್ರಶಾಂತತೆಯ ಆಳದಲ್ಲಿ ಮುಳುಗು ಹಾಕಬೇಕು ಮತ್ತು ಅದೇ ನಾವಾಗಬೇಕು.

**– ಶ್ರೀ ಅರವಿಂದರು**

*

(1/255) ಎಲ್ಲದರಲ್ಲಿ ನಿನ್ನ ಸಾರ್ವಭೌಮ ಚಿಂತನೆಯ ಶಾಂತಿ ಮತ್ತು ನಿನ್ನ ನಿರ್ವಿಕಲ್ಪ ಶಾಶ್ವತತೆಯ ಸ್ಥಿರ ದೃಷ್ಟಿ ಇವುಗಳ ಕೊರತೆಯಿದೆ.

**– ಶ್ರೀಮಾತೆ**

*

## ಸಮಗ್ರ ನಂಬಿಕೆ ಮತ್ತು ಭಗ್ನವಾಗದ ತಾಳ್ಮೆ

(20/232) ಅವಶ್ಯವಾಗಿ ಮೊದಲು ಹೊಂದಿರಬೇಕಾದ ಗುಣಗಳೆಂದರೆ ನಂಬಿಕೆ ಹಾಗೂ ತಾಳ್ಮೆ. ಹೆಚ್ಚು ನಮ್ರವಾಗಿರುವ, ಅಚಂಚಲವಾಗಿರುವ ಈ ಗುಣಗಳ ಆಧಾರವನ್ನು ಉಪೇಕ್ಷೆ ಮಾಡಿದರೆ ಹೃದಯದ ಅತ್ಯುತ್ಸಾಹ ಮತ್ತು ಸ್ವರ್ಗದ ರಾಜ್ಯವನ್ನು ದಾಳಿ ಮಾಡಿ ವಶಪಡಿಸಿಕೊಳ್ಳಬೇಕೆಂದು ಅರಸುವ ಆತುರದ ಸಂಕಲ್ಪದ ಹಿಂಸೆಗಳು ದುಸ್ಥಿತಿಯನ್ನುಂಟು ಮಾಡುವ ಭಾವೋದ್ರೇಕದ ಪ್ರತಿಕ್ರಿಯೆ–ಗಳಿಗೆ ಒಳಗಾಗಬಲ್ಲವು.

**– ಶ್ರೀ ಅರವಿಂದರು**

*

(13/78) ನಂಬಿಕೆ ಎಷ್ಟು ಮಹತ್ವದ್ದೆಂದು, ಅದೊಂದು ಪವಾಡ, ಪವಾಡಗಳ ಸೃಷ್ಟಿಕರ್ತ ಎಂಬುದನ್ನು ಜನರು ತಿಳಿದುಕೊಂಡಿರುವುದಿಲ್ಲ. ಪ್ರತಿಯೊಂದು ಕ್ಷಣ ಭಗವಂತ ನಿಮ್ಮನ್ನು ಎತ್ತಿ ಹಿಡಿಯಬೇಕು, ಮುಂದೂಡಬೇಕು ಎಂದು ನೀವು ನಿರೀಕ್ಷಿಸುತ್ತಿದ್ದರೆ ಅವನು ನಿಮ್ಮನ್ನು ಎತ್ತಿ ಹಿಡಿಯುತ್ತಾನೆ ಮತ್ತು ಅವನಲ್ಲಿರುತ್ತಾನೆ, ಅತಿ ಹತ್ತಿರ, ಇನ್ನೂ ಹತ್ತಿರ ಇರುತ್ತಾನೆ.

**– ಶ್ರೀಮಾತೆ**

*



(14/173) ಮನುಷ್ಯ ಪಟ್ಟು ಹಿಡಿದು ಕಾರ್ಯಕೈಕೊಳ್ಳುವುದರ ಮೂಲಕ ತೊಂದರೆಗಳ ಮೇಲೆ ಜಯ ಸಾಧಿಸುತ್ತಾನೆ, ಅವುಗಳಿಂದ ದೂರ ಓಡಿ ಹೋಗುವು ದರಿಂದ ಅಲ್ಲ. ಪಟ್ಟು ಹಿಡಿದು ಕಾರ್ಯ ಕೈಕೊಳ್ಳುವವನು ವಿಜಯಿಯಾಗುವುದು ನಿಶ್ಚಿತ. ಅತ್ಯಂತ ಹೆಚ್ಚಿನ ತಾಳ್ಮೆಯುಳ್ಳವರ ಬಳಿ ಜಯ ಸಾಗಿ ಹೋಗುತ್ತದೆ. ಯಾವಾಗಲೂ ನಿಮಗೆ ಸಾಧ್ಯವಿದ್ದಷ್ಟು ಒಳ್ಳೆಯದನ್ನು ಮಾಡಿರಿ, ಭಗವಂತ ಪರಿಣಾಮಗಳ ಕಾಳಜಿ ತೆಗೆದುಕೊಳ್ಳುತ್ತಾನೆ.

**– ಶ್ರೀಮಾತೆ**

*

(14/173) ಎಲ್ಲ ಪರಿಸ್ಥಿತಿಗಳಲ್ಲಿ ದೈವೀ ಸತ್ಯದ ಪರವಾಗಿರಲು ಶಕ್ತನಾಗಿರುವುದು ಮತ್ತು ಅದನ್ನು ವಿರೋಧಿಸುವವರ ಮಧ್ಯೆ ಸಾರಿ ಹೇಳುವುದು, ಅವಶ್ಯವಿದ್ದೆಡೆ–ಯಲ್ಲೆಲ್ಲ ಅದಕ್ಕಾಗಿ ಹೋರಾಡುವುದು ಮತ್ತು ಹಾಗೆಯೇ ಮನುಷ್ಯ ಯಾವಾಗಲೂ ತನ್ನ ಅತ್ಯುಚ್ಚ ಪ್ರಜ್ಞೆಯಿಂದ ಕಾರ್ಯಮಾಡುವುದು ಶೌರ್ಯದ ಲಕ್ಷಣ.

**– ಶ್ರೀಮಾತೆ**

*

**ಶೌರ್ಯದ ಲಕ್ಷಣ :**

(14/179)

1. ಯಾವಾಗಲೂ ಅತ್ಯಂತ ಸುಂದರವಾದ, ಉದಾರವಾದ ಕಾರ್ಯ ಕೈಕೊಳ್ಳುವುದು.
2. ಮನುಷ್ಯ ಯಾವಾಗಲೂ ತನ್ನ ಅತ್ಯುಚ್ಚ ಪ್ರಜ್ಞೆಯಲ್ಲಿ ಕಾರ್ಯ ಮಾಡುವುದು.

**– ಶ್ರೀಮಾತೆ**

*

## ಬಲ – ಅವಶ್ಯವಾದ ಒಂದು ವಿಷಯ

(1/64) ಆಳದಲ್ಲಿಳಿದು ನಾವು ನೋಡಿದಾಗ, ಒಂದು ವಿಷಯದ ಕೊರತೆ ಇರುವುದು ನಮಗೆ ಕಂಡು ಬರುತ್ತದೆ: ಅದು ಬಲದ ಕೊರತೆ. ಆ ಬಲ ಭೌತಿಕ, ಮಾನಸಿಕ, ನೈತಿಕ ಇಲ್ಲವೆ ಆಧ್ಯಾತ್ಮಿಕವಾದದ್ದಾಗಿರಬಹುದು, ಏನನ್ನಾದರೂ ದೊರಕಿಸುವುದಕ್ಕಿಂತ ಮೊದಲು ಆ ಬಲವನ್ನು ದೊರಕಿಸಬೇಕು. ಕ್ಷೀಣವಾಗದ,

ನಾಶವಾಗದ ಉಳಿದೆಲ್ಲ ಬಲಗಳ ಉಗಮವಾದ ಆಧ್ಯಾತ್ಮಿಕ ಬಲ ಹೊಂದಿರುವುದು ಹೆಚ್ಚು ಮಹತ್ವದ್ದು. ನಮ್ಮಲ್ಲಿ ಬಲವಿದ್ದರೆ ಉಳಿದೆಲ್ಲವೂ ಸುಲಭವಾಗಿ, ಸ್ವಾಭಾವಿಕವಾಗಿ ನಮ್ಮೊಡನೆ ಕೂಡಿಕೊಳ್ಳುತ್ತವೆ. ಬಲದ ಅಭಾವವಿದ್ದಾಗ ನಾವು ಕನಸಿನಲ್ಲಿರುವ ಮನುಷ್ಯರ ಹಾಗಿರುತ್ತೇವೆ; ಅವರಿಗೆ ಕೈಗಳಿರುತ್ತವೆ, ಆದರೆ ಅವರು ಏನನ್ನೂ ಹಿಡಿದುಕೊಳ್ಳಲಾರರು, ಹೊಡೆಯಲಾರರು, ಅವರಿಗೆ ಕಾಲುಗಳಿರುತ್ತವೆ, ಆದರೆ ಅವರು ಓಡಲಾರರು. . .

*

(1/67) ಹಾಗಾಗಿ ಬಲ, ಮತ್ತೆ ಬಲ, ಇನ್ನೂ ಹೆಚ್ಚಿನ ಬಲ, ಇದು ನಮ್ಮ ಮಾನವ ಕುಲದ ಆವಶ್ಯಕತೆ. ನಾವು ಬಲವನ್ನು ಬಯಸುತ್ತಿದ್ದರೆ, ದೈವೀಬಲದ ಜಗನ್ಮಾತೆ–ಯನ್ನು ಆರಾಧಿಸದೆ ಅದನ್ನು ಹೇಗೆ ಪಡೆಯಬಲ್ಲೆವು? ಅವಳು ಪೂಜೆಗೊಳ್ಳಲು ಬಯಸುತ್ತಿದ್ದರೆ ಅದು ತನ್ನ ಸಲುವಾಗಿ ಅಲ್ಲ, ಆದರೆ ಅದು ನಮಗೆ ಸಹಾಯ ಮಾಡುವುದಕ್ಕಾಗಿ ಹಾಗೂ ತನ್ನನ್ನು ನಮಗೆ ಕೊಟ್ಟುಕೊಳ್ಳುವುದಕ್ಕಾಗಿ ಇರುತ್ತದೆ. ಇದು ವಿಲಕ್ಷಣ ಕಲ್ಪನೆಯಲ್ಲ, ಮೂಢನಂಬಿಕೆಯಲ್ಲ, ಆದರೆ ವಿಶ್ವದ ಸಾಮಾನ್ಯ ನಿಯಮ. ದೇವತೆಗಳನ್ನು ಕೇಳಿಕೊಳ್ಳದೆ ಇದ್ದರೆ ಅವರು ಬಯಸಿದಾಗ್ಯೂ ತಮ್ಮನ್ನು ಕೊಟ್ಟುಕೊಳ್ಳಲಾರರು. ಸನಾತನನೂ ಕೂಡ ಮನುಷ್ಯರ ಮೇಲೆ ಅರಿವು ಮೂಡಿಸದೆ ಬರುವುದಿಲ್ಲ. ಭಗವಂತ ತನ್ನ ಅವರ್ಣನೀಯ ಸೌಂದರ್ಯವನ್ನು, ದಿವ್ಯಾನಂದವನ್ನು ಆತ್ಮದ ಮೇಲೆ ಸುರಿಯುವುದಕ್ಕಾಗಿ ನಾವು ಅವನತ್ತ ಹೊರಳ–ಬೇಕು, ಅವನನ್ನು ಬಯಸಬೇಕು ಮತ್ತು ಆರಾಧಿಸಬೇಕು ಎಂಬುದನ್ನು ಅನುಭವದ ಮೂಲಕ ಪ್ರತಿಯೊಬ್ಬ ಭಕ್ತ ತಿಳಿದುಕೊಂಡಿರುತ್ತಾನೆ. ಸನಾತನನ ಬಗ್ಗೆ ಸತ್ಯವಾದದ್ದು ಅವನಿಂದ ಹೊರಹೊಮ್ಮಿದ ಜಗನ್ಮಾತೆಯನ್ನು ಕುರಿತು ಕೂಡ ಸತ್ಯವಾಗಿರುತ್ತದೆ.

(1/71) ಹಾಗಾಗಿ ಬನ್ನಿರಿ, ಜಗನ್ಮಾತೆಯ ಕರೆಯನ್ನು ಲಕ್ಷ್ಯಗೊಟ್ಟು ಕೇಳಿರಿ, ಅವಳು ಈಗಾಗಲೆ ನಮ್ಮ ಹೃದಯಗಳಲ್ಲಿ ಇದ್ದಾಳೆ, ತನ್ನನ್ನು ಪ್ರಕಟಿಸಲು, ಪೂಜೆಗೊಳ್ಳಲು ಬಯಸುತ್ತಾಳೆ–ನಿಷ್ಕ್ರಿಯಳಾಗಿದ್ದಾಳೆ, ಏಕೆಂದರೆ ನಮ್ಮೊಳಗಿರುವ ದೇವನನ್ನು ತಮಸ್ಸು ಮುಚ್ಚಿ ಹಾಕಿದೆ, ಆ ದೇವ ಅವಳ ನಿಷ್ಕ್ರಿಯತೆಯಿಂದಾಗಿ ಕ್ಷೋಭೆಗೊಳ–ಗಾಗಿದ್ದಾನೆ, ದುಃಖಪೀಡಿತನಾಗಿದ್ದಾನೆ, ಏಕೆಂದರೆ ಅವಳ ಮಕ್ಕಳು ತಮಗೆ ಸಹಾಯ ನೀಡೆಂದು ಅವಳನ್ನು ಕರೆಯುತ್ತಿಲ್ಲ. ನಿಮ್ಮೊಳಗೆ ಅವಳು ಅಲುಗಾಡು–ತ್ತಿರುವುದನ್ನು ಭಾವನೆಗೆ ತಂದುಕೊಳ್ಳುತ್ತಿರುವ ನೀವು ನಿಮ್ಮನ್ನು ಆವರಿಸಿದ ಕಪ್ಪು ಪರದೆಯನ್ನು ಬಿಸಾಕಿರಿ, ನಿಮ್ಮನ್ನು ಸೆರೆಯಲ್ಲಿರಿಸಿರುವ ಸೋಮಾರಿತನದ



ಗೋಡೆಗಳನ್ನು ಮುರಿದು ಹಾಕಿರಿ. ನಿಮ್ಮ ದೇಹಗಳಿಂದ, ಬುದ್ಧಿಮತ್ತೆಯಿಂದ, ಮಾತಿನಿಂದ, ನಿಮ್ಮ ಸಂಪತ್ತಿನಿಂದ ಇಲ್ಲವೆ ನಿಮ್ಮ ಪ್ರಾರ್ಥನೆ, ಪೂಜೆಗಳಿಂದ ನಿಮ್ಮಲ್ಲಿ ಪ್ರತಿಯೊಬ್ಬನೂ ನಿಮ್ಮ ಕ್ಷಮತೆಗನುಗುಣವಾಗಿ ಅವಳಿಗೆ ಸಹಾಯ ಸಲ್ಲಿಸಿರಿ. ಹಿಂದೆಗೆಯುವುದು ಬೇಡ, ಅವಳಿಂದ ಕರೆ ಬಂದಾಗ ಯಾರು ಓಗೊಡುವುದಿಲ್ಲವೋ ಅಂತಹರ ಬಗ್ಗೆ ಅವಳು ಬಂದಾಗ ಕೋಪಗೊಳ್ಳಬಹುದು, ಆದರೆ ಯಾರು ಅವಳಿಗೆ ಸಹಾಯ ಸಲ್ಲಿಸಿರುವರೋ ಅವರಿಗೆ ಅವಳ ಬರುವಿಕೆ ಸ್ವಲ್ಪ ಪ್ರಮಾಣದಲ್ಲಿ ಕಂಡು ಬಂದಾಗ್ಯೂ ಅವಳ ಮುಖ ಎಷ್ಟೊಂದು ಸೌಂದರ್ಯ ಹಾಗೂ ದಯಾಪರತೆಗಳಿಂದ ಕೂಡಿರುತ್ತದೆ!

*

(2/20–21) ಭಾರತ ದೇಶಕ್ಕಾಗಿ, ಜಗತ್ತಿಗಾಗಿ ಈಗ ಭಗವಂತನ ಕಾರ್ಯ ಮಾಡುತ್ತಿರುವ ತರುಣ ವ್ಯಕ್ತಿಗಳಿಗೆ ನಾವು ಹೇಳುತ್ತೇವೆ: "ಯುರೋಪದ ವಿಚಾರ–ಗಳಿಗೆ ನಿಮ್ಮನ್ನು ಅಧೀನಗೊಳಿಸಿದರೆ, ಜೀವನವನ್ನು ಪ್ರಾಪಂಚಿಕ ದೃಷ್ಟಿಕೋನದಿಂದ ನೋಡಿದರೆ ನೀವು ಈ ಆದರ್ಶಗಳನ್ನು ಮನಸಾರೆ ಒಪ್ಪಿಕೊಳ್ಳಲಾರಿರಿ. ಪ್ರಾಪಂಚಿಕ ದೃಷ್ಟಿಕೋನದಿಂದ ನೀವೇನೂ ಅಲ್ಲ, ಆಧ್ಯಾತ್ಮಿಕವಾಗಿ ನೀವು ಎಲ್ಲವೂ ಆಗಿದ್ದೀರಿ. ಎಲ್ಲದರಲ್ಲಿ ನಂಬಿಕೆಯಿರಿಸಿರುವ, ಎಲ್ಲವನ್ನೂ ಧೈರ್ಯದಿಂದ ಎದುರಿಸುವ, ಎಲ್ಲವನ್ನೂ ತ್ಯಾಗಮಾಡಲು ಶಕ್ತನಾಗಿರುವ ವ್ಯಕ್ತಿ ಭಾರತೀಯನಾಗಿರುತ್ತಾನೆ. ಆದ್ದರಿಂದ ಮೊದಲು ನೀವು ಭಾರತೀಯರಾಗಿರಿ. ನಿಮ್ಮ ಪೂರ್ವಜರ ಪಿತ್ರಾರ್ಜಿತ ಸ್ವತ್ತನ್ನು ಮರಳಿ ಪಡೆಯಿರಿ, ಯೋಚನೆಯನ್ನು, ಶಿಸ್ತುಪಾಲನೆಯನ್ನು, ಚಾರಿತ್ರ್ಯ–ವನ್ನು, ಜೀವನವನ್ನು ಮರಳಿ ಪಡೆಯಿರಿ. ವೇದಾಂತ ಗೀತೆ ಹಾಗೂ ಯೋಗ ಇವುಗಳನ್ನು ಮರಳಿ ಪಡೆಯಿರಿ, ಅವುಗಳನ್ನು ಕೇವಲ ಬುದ್ಧಿಮತ್ತೆ ಇಲ್ಲವೆ ಭಾವೋನ್ಮತ್ತತೆಗಳಲ್ಲಷ್ಟೇ ಪಡೆಯದೆ ನಿಮ್ಮ ಜೀವನದಲ್ಲಿ ಮರಳಿ ಪಡೆಯಿರಿ. ಅವುಗಳನ್ನು ಜೀವಿಸಿರಿ, ನೀವು ಶ್ರೇಷ್ಠರೂ, ದೃಢತೆಯುಳ್ಳವರೂ, ಪ್ರಬಲರೂ, ಅಜೇಯರೂ ಭಯರಹಿತರೂ ಆಗುವಿರಿ. ಗಹನತೆ, ಅಸಾಧ್ಯತೆ ಇವು ನಿಮ್ಮ ಶಬ್ದಕೋಶದಿಂದ ಮಾಯವಾಗುವವು. ಏಕೆಂದರೆ ಆತ್ಮದಲ್ಲಿ ಬಲ ಶಾಶ್ವತ–ವಾಗಿರುತ್ತದೆ. ಹೊರಗಿನ ಸಾಮ್ರಾಜ್ಯವನ್ನು ಗೆದ್ದುಕೊಳ್ಳುವುದಕ್ಕಿಂತ ಮೊದಲು ನಿಮ್ಮದೇ ಸಾಮ್ರಾಜ್ಯವನ್ನು ಅಂದರೆ ಆಂತರಿಕ ಸ್ವರಾಜ್ಯವನ್ನು ಮರಳಿ ಪಡೆಯ–ಬೇಕು. ಅಲ್ಲಿ ಜಗನ್ಮಾತೆ ನೆಲೆಸಿದ್ದಾಳೆ ಮತ್ತು ತಾನು ಬಲವನ್ನು ಕೊಡಲು ಪೂಜೆ–ಗೊಳ್ಳುವುದಕ್ಕಾಗಿ ಕಾದುಕೊಂಡಿದ್ದಾಳೆ. ಅವಳನ್ನು ನಂಬಿರಿ, ಅವಳ ಸೇವೆ ಮಾಡಿರಿ,

ನಿಮ್ಮ ಸಂಕಲ್ಪಗಳನ್ನು ಅವಳ ಸಂಕಲ್ಪದಲ್ಲಿ ಲಯಗೊಳಿಸಿರಿ, ನಿಮ್ಮ ಸಂಕಲ್ಪಗಳನ್ನು ಅವಳ ಸಂಕಲ್ಪದಲ್ಲಿ, ನಿಮ್ಮ ಅಹಂಕಾರವನ್ನು ದೇಶದ ಶ್ರೇಷ್ಠತರ ಅಹಂಕಾರದಲ್ಲಿ, ನಿಮ್ಮ ಪ್ರತ್ಯೇಕ ಸ್ವಾರ್ಥವನ್ನು ಮಾನವತೆಯ ಸೇವೆಯಲ್ಲಿ ಕಳೆದುಕೊಳ್ಳಿರಿ. ಎಲ್ಲ ಬಲದ ಮೂಲವನ್ನು ನಿಮ್ಮಲ್ಲಿಯೇ ಮರಳಿ ಪಡೆಯಿರಿ, ಉಳಿದದ್ದೆಲ್ಲವನ್ನು ಅಂದರೆ ಸಾಮಾಜಿಕ ದೃಢತೆ, ಬೌದ್ಧಿಕ ಸರ್ವಶ್ರೇಷ್ಠತೆ, ರಾಜಕೀಯ ಸ್ವಾತಂತ್ರ್ಯ, ಮಾನವ ಯೋಚನೆಯ ಮೇಲೆ ಪ್ರಭುತ್ವ, ಜಗತ್ತಿನ ಮುಖಂಡತ್ವ ಇವೆಲ್ಲವುಗಳನ್ನು ನಿಮಗೆ ಅಧಿಕವಾಗಿ ಕೊಡಲಾಗುವುದು."

**– ಶ್ರೀ ಅರವಿಂದರು**

*

## ನಾಲ್ಕುಪಟ್ಟು ವ್ಯಕ್ತಿ ವಿಶಿಷ್ಟತೆಯಿಂದ ಕೂಡಿದ ಪೂರ್ಣತೆ

(21/720–21) ಜ್ಞಾನಿಯಾದ ಮನುಷ್ಯನಲ್ಲಿ ಬೌದ್ಧಿಕ ಹಾಗೂ ನೈತಿಕ ಧೈರ್ಯ, ಸಂಕಲ್ಪ, ಕೆಚ್ಚೆದೆಯ ಧೈರ್ಯ, ಹೊಸ ರಾಜ್ಯಗಳನ್ನು ತೆರೆದು ಜಯಿಸಬೇಕಾದ ಬಲ ಇವೆಲ್ಲ ಇಲ್ಲದೆ ಇದ್ದರೆ ದೈವೀ ಸತ್ಯಕ್ಕೆ ಪರಿಪೂರ್ಣತೆಯ ಸ್ವಾತಂತ್ರ್ಯದಿಂದ ಸೇವೆ ಸಲ್ಲಿಸಲಾಗುವುದಿಲ್ಲ. ಹಾಗಿಲ್ಲದಿದ್ದರೆ ಅವನು ಸೀಮಿತ ಬುದ್ಧಿಮತ್ತೆಯ ಗುಲಾಮ ಇಲ್ಲವೆ ಸೇವಕ ಇಲ್ಲವೆ ಸ್ಥಾಪಿತವಾದ ಜ್ಞಾನದ ಮತಾಚರಣೆ ಮಾಡುವ ಉಪಾಸಕನಾಗುತ್ತಾನೆ.[1] – ಅವನಲ್ಲಿ ತನ್ನ ಜ್ಞಾನದ ಸತ್ಯಗಳನ್ನು ಜೀವನದಲ್ಲಿ ಉಪಯೋಗಿಸಲು ಕಾರ್ಯರೂಪಕ್ಕೆ ತರುವಂತೆ ಮಾರ್ಪಾಡು ಮಾಡುವ ಕೌಶಲವಿರದಿದ್ದರೆ ಆ ಜ್ಞಾನದ ಅತ್ಯಂತ ಒಳ್ಳೆಯ ಪ್ರಯೋಜನವನ್ನು ಅವನು ಪಡೆಯಲಾರ; ಹಾಗಿಲ್ಲದಿದ್ದರೆ ಅವನು ಕೇವಲ ವಿಚಾರದಲ್ಲಿ ಜೀವಿಸುತ್ತಾನೆ– ಅವನಲ್ಲಿ ಮಾನವತೆಗೆ, ಮನುಷ್ಯನಲ್ಲಿರುವ ದೇವನಿಗೆ ತನ್ನ ಸತ್ತೆಯ ಪ್ರಭುವಿಗೆ ಸೇವೆ ಸಲ್ಲಿಸುವ ಮನೋಭಾವವಿರದಿದ್ದರೆ, ಅವನು ತನ್ನ ಜ್ಞಾನವನ್ನು ಇಡಿಯಾಗಿ ಮುಡುಪಾಗಿರಿಸಲಾರ.

ಸಾಮರ್ಥ್ಯವುಳ್ಳ ಮನುಷ್ಯ ಜ್ಞಾನ ಹಾಗೂ ತರ್ಕದ ಪ್ರಕಾಶದ ಮೂಲಕ ಇಲ್ಲವೆ ಧರ್ಮದ ಇಲ್ಲವೆ ಆತ್ಮದ ಮೂಲಕ ತನ್ನ ಶಕ್ತಿಗೆ ಜ್ಞಾನೋದಯವನ್ನುಂಟು

[1] ಬಹುಶಃ ಆ ಕಾರಣದಿಂದಾಗಿಯೆ ಅಂತರ್ಬೋಧೆಯ ಜ್ಞಾನದ ಹಾಗೂ ಆಧ್ಯಾತ್ಮಿಕ ಅನುಭವದ ಕ್ಷೇತ್ರಗಳಲ್ಲಿ ತನ್ನ ಧೈರ್ಯ, ಕೆಚ್ಚೆದೆ, ಗೆದ್ದುಕೊಳ್ಳುವ ಮನೋಧರ್ಮ ಇವುಗಳಿಂದಾಗಿ ಕ್ಷತ್ರಿಯ ವೇದಾಂತದ ಸತ್ಯಗಳನ್ನು ಮೊದಲು ಶೋಧಿಸಿದ.



ಮಾಡಬೇಕು, ಅದನ್ನು ಮೇಲಕ್ಕೆತ್ತಿ ಹಿಡಿಯಬೇಕು, ಹಾಗಿಲ್ಲದಿದ್ದರೆ ಅವನು ಕೇವಲ ಶಕ್ತಿಸಂಪನ್ನನಾದ ಅಸುರನಾಗುತ್ತಾನೆ.–ಅವನಲ್ಲಿ ಕೌಶಲವಿರಬೇಕು, ಅದು ತನ್ನ ಶಕ್ತಿಯನ್ನು ಉಪಯೋಗಿಸಲು, ನಿರ್ವಹಿಸಲು ಮತ್ತು ವಿಧಿಬದ್ಧಗೊಳಿಸಲು, ಇತರರೊಡನಿರುವ ತನ್ನ ಸಂಬಂಧಗಳಿಗೆ ಹೊಂದಿಕೊಳ್ಳುವಂತಾಗಲು ಸಹಾಯ ಮಾಡುತ್ತದೆ, ಹಾಗಿರದೆ ಹೋದರೆ ಅದು ಜೀವನದ ಕ್ಷೇತ್ರದಲ್ಲಿ ಕೇವಲ ಶಕ್ತಿಯ ಮುಂದೂಡಿಕೆಯಾಗಿದ್ದು, ಹಾಯ್ದು ಹೋಗುವ ಬಿರುಗಾಳಿಯಂತಿರುತ್ತದೆ, ಅದು ರಚನಾತ್ಮಕವಾಗಿರುವುದಕ್ಕಿಂತ ಹೆಚ್ಚಾಗಿ ವಿನಾಶಕಾರಿಯಾಗಿರುತ್ತದೆ – ಅವನು ಭಗವಂತನಿಗೆ ಹಾಗೂ ಜಗತ್ತಿಗೆ ಸೇವೆ ಸಲ್ಲಿಸಲು ತನ್ನ ಶಕ್ತಿಯನ್ನು ಉಪ–ಯೋಗಿಸುವ ಹಾಗೂ ವಿಧೇಯವಾಗಿರುವ ಕ್ಷಮತೆಯನ್ನು ಹೊಂದಿರಬೇಕು, ಹಾಗಿರದೆ ಹೋದರೆ ಅವನು ಸ್ವಾರ್ಥಿ, ಪ್ರಾಬಲ್ಯ ಮೆರೆಸುವವನು, ಪ್ರಜಾಪೀಡಕ, ಜನರ ಆತ್ಮಗಳು ಹಾಗೂ ದೇಹಗಳ ಮೇಲೆ ಒತ್ತಡ ಹೇರುವ ಕ್ರೂರಿ ಮನುಷ್ಯ–ನಾಗುತ್ತಾನೆ.

ಉತ್ಪಾದನೆ ಮಾಡುವ ಹಾಗೂ ಕಾರ್ಯಕೈಕೊಳ್ಳಲು ಸಮರ್ಥನಾಗಿರುವ ಮನುಷ್ಯನಲ್ಲಿ ಕೇಳಿ ತಿಳಿದುಕೊಳ್ಳುವ ತೆರೆದ ಮನಸ್ಸು, ವಿಚಾರಗಳು ಹಾಗೂ ಜ್ಞಾನವಿರಬೇಕು, ಹಾಗಿರದೆ ಹೋದರೆ ವಿಸ್ತರಿಸಿಕೊಳ್ಳುವ ಬೆಳವಣಿಗೆಯಿಲ್ಲದ, ದೈನಂದಿನ ಚಟುವಟಿಕೆಗಳಲ್ಲಿ ಅವನು ಚಲಿಸುತ್ತಿರುವಂತಾಗುತ್ತದೆ, ಅವನಲ್ಲಿ ಧೈರ್ಯವಿರಬೇಕು, ಮತ್ತು ಉದ್ಯಮ ಸಾಹಸವಿರಬೇಕು. ಅಲ್ಲದೆ ಅವನ ಗಳಿಕೆ ಉತ್ಪಾದನೆಗಳಲ್ಲಿ ಸೇವಾ ಮನೋಭಾವವಿರಬೇಕು, ಅದರಿಂದಾಗಿ ಅವನು ಕೇವಲ ಗಳಿಸುವವನಾಗಿರದೆ ದಾನಿಯೂ ಆಗುವನು, ಕೇವಲ ಕೂಡಿ ಹಾಕಿ ತನ್ನದೇ ಜೀವನದ ಸಂತೋಷ ಪಡೆಯುವವನಾಗಿರದೆ ತಾನು ಲಾಭ ಗಳಿಸುತ್ತಿರುವ ಪರಿಸರಕ್ಕೆ ಪ್ರಜ್ಞಾಪೂರ್ವಕವಾಗಿ ಫಲಪ್ರದತೆಯನ್ನುಂಟು ಮಾಡುವಂತೆ ಸಹಾಯ ನೀಡುವನು.

ಶ್ರಮಜೀವಿಯಾದ ಹಾಗೂ ಸೇವೆ ಸಲ್ಲಿಸುವ ಮನುಷ್ಯ ತನ್ನ ಕಾರ್ಯದಲ್ಲಿ ಜ್ಞಾನ, ಮರ್ಯಾದೆ, ಅಭೀಪ್ಸೆ ಹಾಗೂ ಕೌಶಲಗಳನ್ನು ತರದೆ ಹೋದರೆ ಅವನು ಸಮಾಜದಲ್ಲಿ ಬೇಸರದ ಕೆಲಸವನ್ನು ಬಿಡುವಿಲ್ಲದೆ ಮಾಡುವ ಹಾಗೂ ಗುಲಾಮ–ನಾಗುವ ಮನುಷ್ಯನಾಗುತ್ತಾನೆ. ಅವನಲ್ಲಿ ಜ್ಞಾನ ಇತ್ಯಾದಿಗಳು ಇದ್ದಾಗ ತೆರೆದ ಮನಸ್ಸಿನಿಂದ, ಸಂಕಲ್ಪದಿಂದ, ಅಭೀಪ್ಸೆಯಿಂದ ಉಚ್ಚತರ ಧರ್ಮಗಳ ಉಪ–ಯುಕ್ತತೆಯನ್ನು ತಿಳಿದುಕೊಂಡು ಮೇಲಿನ ಹಂತಕ್ಕೇರುತ್ತಾನೆ.

ಮನುಷ್ಯ ಇವೆಲ್ಲ ಸಾಮರ್ಥ್ಯಗಳನ್ನು ಒಳಗೊಳ್ಳುವಂತಾದಾಗ,–ಅವುಗಳಲ್ಲಿ ಒಂದು ಉಳಿದವುಗಳನ್ನು ಮುನ್ನಡೆಸಬಹುದು–ಮತ್ತು ಹೆಚ್ಚು ಹೆಚ್ಚಾಗಿ ತನ್ನ ಸ್ವಭಾವವನ್ನು ನಾಲ್ಕುಪಟ್ಟು ಕ್ಷಮತೆಯಿರುವ ಆತ್ಮದ ಪೂರ್ತಿಗೊಂಡ ವಿಶ್ವಂಭರ ಕ್ಷಮತೆಯಲ್ಲಿ ತೆರೆದುಕೊಂಡಂತೆ ಅವನ ಶ್ರೇಷ್ಠತರ ಪರಿಪೂರ್ಣತೆ ಬರುತ್ತದೆ. ಈ ಧರ್ಮಗಳಲ್ಲಿ ಪ್ರತ್ಯೇಕವಾದದ್ದರೊಂದರಲ್ಲಿ ಅವನನ್ನು ಕೊರೆದು ತೆಗೆದ ಹಾಗಿರುವುದಿಲ್ಲ, ಇವೆಲ್ಲ ಸಾಮರ್ಥ್ಯಗಳು ಅವನಲ್ಲಿ ಕಾರ್ಯನಿರತವಾಗಿರುತ್ತವೆ, ಮೊದಲು ಸರಿಯಾಗಿ ರೂಪಗೊಂಡಿರದೆ ಗೊಂದಲಮಯವಾಗಿರುತ್ತವೆ, ಆದರೆ ಅವನು ಜನ್ಮಾಂತರಗಳಲ್ಲಿ ಇವುಗಳಲ್ಲಿ ಒಂದು ಧರ್ಮಕ್ಕೆ ಅಥವಾ ಹೆಚ್ಚಿನವುಗಳಿಗೆ ಆಕಾರ ಕೊಡುತ್ತಾನೆ, ಒಂದರಿಂದ ಇನ್ನೊಂದರತ್ತ ಒಂದೇ ಜನ್ಮದಲ್ಲಿ ಪ್ರಗತಿ ಸಾಧಿಸಬಲ್ಲನು, ಹೀಗೆ ಅವನು ಆಂತರಿಕ ಅಸ್ತಿತ್ವದ ಇಡಿಯಾದ ಅಭಿವೃದ್ಧಿ ಪಡೆಯುವತ್ತ ಸಾಗಿ ಹೋಗುತ್ತಾನೆ. ನಮ್ಮ ಜೀವನವೇ ಸ್ವತಃ ಸತ್ಯ ಹಾಗೂ ಜ್ಞಾನ ಕುರಿತು ಶೋಧನೆ ಮಾಡುವುದಾಗಿರುತ್ತದೆ, ನಮ್ಮ ಸಂಕಲ್ಪ ನಮ್ಮೊಂದಿಗೆ ಮತ್ತು ಸುತ್ತುವರಿದ ಶಕ್ತಿಗಳೊಂದಿಗೆ ಹೋರಾಟ ಮತ್ತು ಸಮರ ನಡೆಸುವುದಾಗಿರುತ್ತದೆ, ಸತತ ಉತ್ಪಾದಿಸುವುದಾಗಿರುತ್ತದೆ, ಹೊಂದಾಣಿಕೆ ಮಾಡಿಕೊಳ್ಳುವುದಾಗಿರುತ್ತದೆ, ಜೀವನಾವಶ್ಯಕ ವಸ್ತುಗಳಿಗೆ ಕೌಶಲವನ್ನು ಅನ್ವಯಿಸುವುದಾಗಿರುತ್ತದೆ ಮತ್ತು ತ್ಯಾಗ, ಸೇವೆ ಮಾಡುವುದಿರುತ್ತದೆ.

ಈ ವಿಷಯಗಳು ಸ್ವಭಾವದಲ್ಲಿರುವ ಶಕ್ತಿಯನ್ನು ಕಾರ್ಯ ರೂಪದಲ್ಲಿ ತರುತ್ತಿರುವ ಆತ್ಮದ ಸಾಮಾನ್ಯ ಮುಖಗಳು, ಆದರೆ ನಾವು ನಮ್ಮಂತರಂಗ–ದೊಳಗಿರುವ ನಮ್ಮೊಂದಿಗೆ ಸಮೀಪಿಸುತ್ತಿದ್ದಂತೆ ಈ ರೂಪಗಳಲ್ಲಿ ತೊಡಗಿ–ಕೊಂಡಿದ್ದ ಏನೋ ಒಂದರ ಇಣುಕು ನೋಟ ಹಾಗೂ ಅನುಭವ ಪಡೆಯುತ್ತೇವೆ ಮತ್ತು ಅದು ತನ್ನನ್ನು ಪ್ರತ್ಯೇಕಗೊಳಿಸಿಕೊಂಡು ಅವುಗಳ ಹಿಂದೆ ನಿಂತು ಅವುಗಳಿಗೆ ಚಾಲನೆ ನೀಡಬಲ್ಲದು, ಅದು ಸರ್ವ ಸಾಮಾನ್ಯ ದೈವೀ ಸಾನ್ನಿಧ್ಯ ಇಲ್ಲವೆ ದೈವೀ ಸಾಮರ್ಥ್ಯವಾಗಿದ್ದು ಈ ಜೀವಿಸುವ ಹಾಗೂ ಯೋಚಿಸುವ ಯಂತ್ರದ ವಿಶೇಷ ಕಾರ್ಯಗತಿಯ ಮೇಲೆ ನೆಲೆಸಲು ತರಲಾದ ರೀತಿಯದಾಗಿರುತ್ತದೆ. ಇದೇ ಸ್ವತಃ ಆತ್ಮದ ಶಕ್ತಿಯಾಗಿದ್ದು ಅದರ ಸ್ವಭಾವದ ಮೇಲೆ ಅಧ್ಯಕ್ಷತೆ ವಹಿಸುವಂತಹದು ಮತ್ತು ಅದರಲ್ಲಿ ಸಾಮರ್ಥ್ಯಗಳನ್ನು ತುಂಬುವಂತಹದು ಆಗಿರುತ್ತದೆ.

**– ಶ್ರೀ ಅರವಿಂದರು**

*



## ಜೀವನದಿಂದ ಹಿಂಜರಿಯದಿರು

(5/311–12) ಜೀವನದಿಂದ ಹಿಂಜರಿಯದಿರು ಓ ಆರ್ಯ ಪುರುಷ
ದೇಹ ತ್ಯಜಿಸಿ ಹೋಗಲು ದೇವ ಆಜ್ಞೆ ನೀಡುವವರೆಗೆ
ಒಳಿತು ಕೆಡುಕಗಳನು, ಪಾಪ–ಪುಣ್ಯಗಳನು
ಸ್ವೀಕರಿಸು ಸಂತೋಷ ಹರ್ಷಗಳೊಡನೆ.

ನೀ ಜೀವಿಸಿರುವವರೆಗೆ ನೆರವೇರಿಸು ನಿನ್ನ
ಪಾತ್ರವನು ಪರಿಪೂರ್ಣವೆನಿಸುವ ತೆರದಿ
ಭೂತಲವೊಂದು ವೇದಿಕೆ, ನೀ ಬಲಿಷ್ಠ ನಟ
ಎಂದು ಭಾವಿಸು, ನಾಟಕವೆಲ್ಲ ಆ ದೇವನದೆ.

ಕರ್ಮ ನಿನ್ನದು, ಫಲವೆಲ್ಲ ದೇವನಿಗೆ ಸೇರಿದುದು
ಇರುವವನೊಬ್ಬ ಆ ದೇವ ಮಾತ್ರ.
ಕೈಕೊಳ್ಳು ಕರ್ಮವನು, ಪ್ರೀತಿಸು, ತಿಳಿದುಕೋ–ಆ ರೀತಿ ನಿನ್ನಾತ್ಮ
ಅಮರ ಆನಂದವನು ಗೆದ್ದುಕೊಳ್ಳುವುದು.

ಮಾನವರಿಗಾಗಿ, ದೇವನಿಗಾಗಿ ನಿನ್ನ ಪ್ರೇಮವಿರಲಿ ಓ ರಾಜನ್
ಪ್ರೀತಿಸಲು, ಸಂತಸಪಡಲು ಹೆದರದಿರು
ಕಾರಣ ಮೃತ್ಯು ಸಾಗಿ ಹೋಗುವ, ದುಃಖ
ಊಹಿಸಿಕೊಂಡ ವಿಷಯ
ಕಿರಿಕಿರಿಯನ್ನುಂಟು ಮಾಡುವುದದು ಮೂರ್ಖರಿಗೆ.

ತನ್ನತನದಿಂದ ಪಾರಾಗಿ ಹೋಗು, ಪ್ರೇಮದಲ್ಲಿ ಕಾಣು
ಉಚ್ಚತರ ಸಂತಸವನು.

. . . . . .

ದೇವನನ್ನರಸು ಭೂತಲದ ಮೇಲೆ, ಕಾರಣ ಅವನು
ತನ್ನ ಗುರಿಯನರಸುವ ಮಾನವನ ಯಶಸ್ಸಿಗಾಗಿ
ಹಲವಾರು ಲೋಕಗಳ ಸಂದಣಿಯೊಳಗೆ ಬಲಿಷ್ಠ ರಾಜ್ಯವನು
ನಿರ್ಮಿಸಲು ಬಯಸಿಹನು.

ನಿನ್ನ ಮಾನವ ಬಲವನು, ನಿನ್ನ ಕುಲವನು
ಪರಿಪೂರ್ಣಗೊಳಿಸು ಓ, ರಾಜನ್
ಕಾರಣ ನೀನೇ ಆ ದೇವನಾಗಿರುವಿ ಕೇವಲ ರಾತ್ರಿ
ನಿನ್ನಾತ್ಮವನು ಆವರಿಸಿಹುದು.
ನಿನ್ನದೇ ಸಂಕಲ್ಪದಿಂದ ತೊಲಗಿಸದನು, ಮರಳಿ ದೊರಕಿಸು
ನೀನು ನಿಜವಾಗಿ ಇರುವ ನಿರ್ಮಲ ಇಡಿಯಾದುದನು.
ದೇವನೇ ಗುರಿ, ಅವನೆಡೆಗೆ ಆಗ ದೈವೀ ಪ್ರೇಮಿಯಾದ
ಮಾನವನನ್ನು ಮೇಲಕೆತ್ತುವಿ.

**– ಶ್ರೀ ಅರವಿಂದರು**

*

## ಭವಿಷ್ಯತ್ತಿಗೆ ಅತಿ ಹೆಚ್ಚು ಸಹಾಯಕರಾಗುವ ವ್ಯಕ್ತಿಗಳು

(15/250) ಆಧ್ಯಾತ್ಮಿಕ ಉತ್ಕ್ರಾಂತಿ ನಮ್ಮ ಅದೃಷ್ಟವಾಗಿದೆ ಮತ್ತು ಹಾಗಾಗಿ ಮನುಷ್ಯನಿಗೆ ಅದು ಬಹಳ ಭವ್ಯ ರೀತಿಯಲ್ಲಿ ಆವಶ್ಯಕವಾಗಿರುತ್ತದೆ ಎಂಬುದನ್ನು ಗುರುತಿಸುವ ಜನರು ಭವಿಷ್ಯತ್ತಿಗೆ ಅತಿ ಹೆಚ್ಚು ಸಹಾಯಕರಾಗುವ ವ್ಯಕ್ತಿಗಳಾಗಿ–ರುತ್ತಾರೆ. ಪಶು ಮಾನವನನ್ನು ಭವ್ಯ ರೀತಿಯಲ್ಲಿ ಮನಸ್ಸು ಪ್ರಧಾನವಾದ ಮನುಷ್ಯನನ್ನಾಗಿ ಪರಿವರ್ತಿಸಿದ ಹಾಗೆ ಮತ್ತು ಅತ್ಯುಚ್ಚ ಮಟ್ಟದಲ್ಲಿ ಮನಸ್ಸು ಪ್ರಧಾನವಾದ ಉಚ್ಚ ರೀತಿಯ ಮಾನವತೆ ರೂಪುಗೊಂಡ ಹಾಗೆ ಈಗ ಅಥವಾ ಭವಿಷ್ಯತ್ತಿನಲ್ಲಿ ಉತ್ಕ್ರಾಂತಿ ಇಲ್ಲವೆ ಪರಿವರ್ತನೆಯ ಮೂಲಕ–ಇವುಗಳಲ್ಲಿ ನಾವು ಯಾವ ಸಿದ್ಧಾಂತವನ್ನು ಬಳಸಿಕೊಳ್ಳುತ್ತೇವೆ ಎಂಬುದು ಮುಖ್ಯವಲ್ಲ–ಸದ್ಯದ ಮಾನವತೆ ಆಧ್ಯಾತ್ಮಿಕ ಮಾನವತೆಯಾಗುವುದು ಮಾನವ ಕುಲದ ಆವಶ್ಯಕತೆ–ಯಾಗಿದೆ ಮತ್ತು ನಿಶ್ಚಿತವಾಗಿ ಪ್ರಕೃತಿಯ ಉದ್ದೇಶವೂ ಆಗಿದೆ; ಮತ್ತು ಆ ಉತ್ಕ್ರಾಂತಿ ಇಲ್ಲವೆ ಪರಿವರ್ತನೆ ಅಂತಹ ವ್ಯಕ್ತಿಗಳಿಗೆ ಆದರ್ಶವಾಗಿರುತ್ತದೆ ಹಾಗೂ ಅದಕ್ಕಾಗಿ ಅವರ ಪ್ರಯತ್ನವಿರುತ್ತದೆ. ತುಲನಾತ್ಮಕ ರೀತಿಯಲ್ಲಿ ಅವರು ಯಾವುದೇ ವಿಶಿಷ್ಟ ನಂಬಿಕೆ ಹಾಗೂ ರೂಪ ಕುರಿತು ಉದಾಸೀನರಾಗಿರುತ್ತಾರೆ ಮತ್ತು ಸ್ವಾಭಾವಿಕವಾಗಿ ಸೆಳೆಯುವ ನಂಬಿಕೆಗಳಲ್ಲಿ ಹಾಗೂ ರೂಪಗಳಲ್ಲಿ ಜನರು ಆಶ್ರಯ ಕಂಡುಕೊಳ್ಳಲಿ ಎಂದು ಅವರನ್ನು ಬಿಟ್ಟುಕೊಡುತ್ತಾರೆ. ಈ ಆಧ್ಯಾತ್ಮಿಕ ಪರಿವರ್ತನೆಯಲ್ಲಿ ಹಾಗೂ ಅದನ್ನು ಜೀವಿಸುವುದಕ್ಕಾಗಿ ಪ್ರಯತ್ನಪಡುವುದರಲ್ಲಿ ನಂಬಿಕೆ ಅತ್ಯಗತ್ಯವಾದದ್ದು ಮತ್ತು ಯಾವುದೇ ಬಗೆಯ ಜ್ಞಾನವನ್ನು–ಅದನ್ನು ಯಾವ ಅಭಿಪ್ರಾಯದಲ್ಲಿ ವ್ಯಕ್ತ–



ಪಡಿಸಲಾಗುತ್ತದೆ ಎಂಬುದು ಮುಖ್ಯವಾಗಿರುವುದಿಲ್ಲ–ಜೀವಿಸುವುದರಲ್ಲಿ ಪರಿ–ವರ್ತಿಸಬಹುದು ಎಂಬುದನ್ನು ಮಾತ್ರ ಅವರು ಗಟ್ಟಿಯಾಗಿ ಹಿಡಿದು–ಕೊಂಡಿರುತ್ತಾರೆ. ಈ ಬದಲಾವಣೆಯನ್ನು ಯಂತ್ರಗಳ ಮೂಲಕ ಮತ್ತು ಬಾಹ್ಯ ಸಂಸ್ಥೆಗಳ ಮೂಲಕ ಪರಿಣಾಮಕಾರಿಯಾಗುವಂತೆ ಮಾಡಬಹುದು ಎಂದು ವಿಶೇಷವಾಗಿ ಯೋಚಿಸುವ ತಪ್ಪನ್ನು ಅವರು ಮಾಡುವುದಿಲ್ಲ. ಅದನ್ನು ಪ್ರತಿಯೊಬ್ಬ ಮನುಷ್ಯ ಆಂತರಿಕವಾಗಿ ಜೀವಿಸಬೇಕು, ಇಲ್ಲವಾದರೆ ಮಾನವ ಕುಲಕ್ಕಾಗಿ ಅದು ನಿಜವಾಗುವಂತೆ ಮಾಡಲಾಗದು ಎಂಬುದನ್ನು ಅವರು ತಿಳಿದುಕೊಂಡಿರುತ್ತಾರೆ ಮತ್ತು ಎಂದೂ ಮರೆಯುವುದಿಲ್ಲ. ಅದರ ಆಂತರಿಕ ಅರ್ಥದಲ್ಲಿ ಅವರು ಪೌರ್ವಾತ್ಯರ ದೃಷ್ಟಿಕೋನವನ್ನು ಆಯ್ದುಕೊಳ್ಳುತ್ತಾರೆ. ಆ ದೃಷ್ಟಿಕೋನ ಮನುಷ್ಯ ತನ್ನ ಅದೃಷ್ಟದ ಹಾಗೂ ಮುಕ್ತಿಯ ರಹಸ್ಯವನ್ನು ಆಂತರಿಕವಾಗಿ ಅರಸಲಿ ಎಂದು ಆಜ್ಞಾಪಿಸುತ್ತದೆ. ಅದು ಹಾಗಿರುವಾಗಲೂ ಪಾಶ್ಚಾತ್ಯರು ಸರಿಯಾಗಿಯೇ ಜೀವನಕ್ಕೆ ಅಂಟಿಸಿರುವ ಮಹತ್ವವನ್ನು, ಅದಕ್ಕೆ ಭಿನ್ನ ರೂಪ ಕೊಡಬೇಕಾಗಿ ಬಂದಾಗ್ಯೂ, ಅವರು ಒಪ್ಪಿಕೊಳ್ಳುತ್ತಾರೆ. ಆ ಮಹತ್ವದ ವಿಷಯವೆಂದರೆ ನಾವು ತಿಳಿದು–ಕೊಂಡಿರುವುದೆಲ್ಲವನ್ನು ಹಾಗೂ ಸಿದ್ಧಿಸಿಕೊಳ್ಳಬಹುದಾದ ಎಲ್ಲವನ್ನು ಅತ್ಯಂತ ಒಳ್ಳೆಯ ರೀತಿಯಲ್ಲಿ ಉಪಯೋಗಿಸಬೇಕು ಎಂಬುದಾಗಿದೆ.

**– ಶ್ರೀ ಅರವಿಂದರು**

*

## ಶಿವಾಜಿ–ಜಯಸಿಂಹ

**(ಮೃತಾತ್ಮರ ನಡುವಿನ ಸಂಭಾಷಣೆ)**

(3/483–85) **ಜಯಸಿಂಹ:** ನಮ್ಮಿಬ್ಬರಲ್ಲಿ ಯಾರೂ ಹೆಚ್ಚು ವಾಡಿಕೆಯಲ್ಲಿ ಉಳಿದುಕೊಂಡಿಲ್ಲ. ದೇಶದಲ್ಲಿ ಮೂರನೆಯ ಶಕ್ತಿ ಪ್ರವೇಶ ಮಾಡಿದೆ, ಅದು ನಿನ್ನ ಕಾರ್ಯದ ಪ್ರಯೋಜನವನ್ನು ತೆಗೆದುಕೊಳ್ಳುತ್ತಿದೆ. ನನ್ನದಾದರೋ ಮುರಿದು ಬಿದ್ದಿದೆ. ನಾನು ಮನಸಾರೆ ಇಷ್ಟಪಟ್ಟ ಆದರ್ಶ ಧೂಳಿನಲ್ಲಿ ಮುಚ್ಚಿ ಹೋಗಿದೆ.

**ಶಿವಾಜಿ :** ನಾನು ಫಲಾಪೇಕ್ಷೆಯಿಂದ ಕಾರ್ಯ ಮಾಡಲಿಲ್ಲ, ವಿಫಲತೆಯಿಂದ ಆಶ್ಚರ್ಯಚಕಿತನಾಗಲಿಲ್ಲ, ಎದೆಗುಂದಲಿಲ್ಲ.

**ಜಯಸಿಂಹ :** ನಾನೂ ಕೂಡ ಪ್ರತಿಫಲಕ್ಕಾಗಿ ಕಾರ್ಯಮಾಡಲಿಲ್ಲ, ಆದರೆ ನನ್ನ ಕಾರ್ಯ ರಜಪೂತ ಜನಾಂಗದ ಆದರ್ಶವನ್ನು ಎತ್ತಿ ಹಿಡಿಯಲಿಕ್ಕಾಗಿತ್ತು.

ಮರ್ಯಾದೆಯಿಂದ ಕೂಡಿದ ಯುದ್ಧದಲ್ಲಿ ಹಿಮ್ಮೆಟ್ಟದ ಧೈರ್ಯ, ಮಿತ್ರರಿಗೆ ಹಾಗೂ ಶತ್ರುಗಳಿಗೆ ದೀನ ಪಕ್ಷಪಾತ (chivelry) , ನಾವು ಆಯ್ದುಕೊಂಡ ಸಾರ್ವಭೌಮನಿಗೆ ಉದಾರವಾದ ಸ್ವಾಮಿನಿಷ್ಠೆ ಇದೆಲ್ಲ ನನಗೆ ನಿಜವಾದ ಹಿಂದೂ ಪರಂಪರೆ ಎನಿಸಿತ್ತು. ಹಿಂದೂ ಜನರಲ್ಲಿ ಏಕತೆ ಮತ್ತು ಅವರ ಪ್ರಾಬಲ್ಯ ಇವುಗಳಿಗಿಂತ ಈ ಆದರ್ಶಕ್ಕೆ ನಾನು ಆದ್ಯತೆ ನೀಡಿದ್ದೆ. ಆದ್ದರಿಂದ ನೀನು ಮಾಡಿದಂತಹ ಶಾಂತಿಯ ಪ್ರಸ್ತಾಪಗಳನ್ನು ನಾನು ಮಾಡಲಿಲ್ಲ. ಆದರೆ ನನ್ನದೇ ಸಂಪ್ರದಾಯದಿಂದ ಕೊಡಬಹುದಾಗಿದ್ದ ಅವಕಾಶವನ್ನು ನಿನಗೆ ಕಲ್ಪಿಸಿಕೊಟ್ಟೆ ಮತ್ತು ನಂಬಿಕೆಯನ್ನು ನನ್ನೊಡನೆ ಮತ್ತು ನಿನ್ನೊಡನೆ ಉಳಿಸಿಕೊಳ್ಳದ್ದರಿಂದ ನಾನು ನನ್ನ ಮಾನ ಉಳಿಸಿಕೊಂಡೆ ಮತ್ತು ನೀನು ಪಾರಾಗಿ ಹೋಗುವುದಕ್ಕೆ ಸಹಾಯ ಮಾಡಿದೆ.

**ಶಿವಾಜಿ :** ಭಗವಂತ ನನಗೆ ಸಹಾಯ ಮಾಡಿದ ಮತ್ತು ಒಬ್ಬ ಮಹಿಳೆಯ ಹೃದಯ ಕಲಕುವಂತೆ ಮಾಡಿ ಅವಳು ನನಗೆ ಪ್ರೇಮ ಹಾಗೂ ಸಹಾಯ ನೀಡುವಂತೆ ಮಾಡಿದ. ಸಂಪ್ರದಾಯಗಳು ಬದಲಾಗುತ್ತವೆ. ರಜಪೂತ ಆದರ್ಶಕ್ಕೆ ಅದರ ಭವಿಷ್ಯವಿದೆ. ಆದರೆ ಎರಕವನ್ನು ಮುರಿದುಹಾಕಬೇಕಾಗಿತ್ತು, ಅದರಿಂದಾಗಿ ಅದರಲ್ಲಿ ತಾತ್ಕಾಲಿಕವಾದದ್ದು ಹೊರಟುಹೋಗುವಂತಾಯಿತು. ನಾನು ಆಯ್ದುಕೊಂಡ ಸಾರ್ವಭೌಮನಿಗೆ ಸ್ವಾಮಿನಿಷ್ಠೆ ಒಳ್ಳೆಯದು, ಆದರೆ ನನ್ನ ದೇಶದ ಆಯ್ಕೆಯ ಸಾರ್ವಭೌಮನಿಗೆ ಸ್ವಾಮಿನಿಷ್ಠೆ ಹೆಚ್ಚು ಒಳ್ಳೆಯದು. ಸಾರ್ವಭೌಮನಲ್ಲಿ ಅಭಿವ್ಯಕ್ತವಾದ ದೈವೀ ಸಾಮರ್ಥ್ಯದಿಂದಾಗಿ ಅವನು ದೈವಿಕವಾಗಿರುತ್ತಾನೆ, ಆದರೆ ಅವನಲ್ಲಿ ಅದಿರುವುದರ ಕಾರಣವೆಂದರೆ ಜನರು ಅವನನ್ನು ಆಯ್ಕೆ ಮಾಡಿರುತ್ತಾರೆ. ದೇಶದಲ್ಲಿರುವ ದೇವನಿಗೆ ಸಾರ್ವಭೌಮ ಸೇವಕನಾಗಿರುತ್ತಾನೆ. ಮರಾಠಿಗಳ ವಿರಾಟ್ ಪುರುಷ ವಿಠೋಬಾ, ಭವಾನಿಯ ಅವತಾರ ಭಾರತ ಇವರ ಬಲದಿಂದ ನಾನು ವಿಜಯಿಯಾದೆ.

**ಜಯಸಿಂಹ :** ನಿನ್ನ ರಾಜಕೀಯ ಆದರ್ಶ ಶ್ರೇಷ್ಠವಾಗಿದೆ, ಆದರೆ ನಮ್ಮ ನೈತಿಕತೆಗೆ ನಿನ್ನ ಸಾಧನಗಳ ಮಾನದಂಡ ಜುಗುಪ್ಸೆ ತರಿಸುವಂತಹದಾಗಿತ್ತು. ಕುಯುಕ್ತಿ, ಮೋಸ, ಕೊಲೆ–ಸುಲಿಗೆ ಇವುಗಳನ್ನು ನಿನ್ನ ಕ್ರಿಯೆಯಲ್ಲಿ ಹೊರತುಪಡಿಸಿರಲಿಲ್ಲ!

**ಶಿವಾಜಿ :** ನನಗಾಗಿ ನಾನು ಹೋರಾಟ ನಡೆಸಲಿಲ್ಲ, ರಾಜ್ಯವಾಳಲಿಲ್ಲ, ಆದರೆ ಭಗವಂತನಿಗಾಗಿ ಅದನ್ನು ಮಾಡಿದೆ, ರಾಮದಾಸ ಸಂತರು ಬೋಧಿಸಿದ ಧರ್ಮದ ಪ್ರಕಾರ ಹಿಂದೂ ರಾಷ್ಟ್ರೀಯತೆಯ ಧರ್ಮಸ್ಥಾಪನೆಗಾಗಿ ನನ್ನ ಹೋರಾಟವಿತ್ತು. ನನ್ನ ಶಿರವನ್ನು ಭವಾನಿ ದೇವಿಗೆ ಅರ್ಪಿಸಿದೆ, ಆದರೆ ಅವಳು ದೇಶದ ಕಲ್ಯಾಣಕ್ಕಾಗಿ



ಯೋಜನೆ ರೂಪಿಸುವುದಕ್ಕಾಗಿ, ಹಂಚಿಕೆ ಹಾಕುವುದಕ್ಕಾಗಿ ನನ್ನ ಶಿರವನ್ನು ಉಳಿಸಿಕೊಳ್ಳಲು ಆಜ್ಞಾಪಿಸಿದಳು. ನನ್ನ ರಾಜ್ಯವನ್ನು ರಾಮದಾಸರಿಗೆ ಒಪ್ಪಿಸಿದೆ, ಆದರೆ ಅವರು ಅದನ್ನು ಭಗವಂತನ ಹಾಗೂ ಮರಾಠಿಗರ ಕಾಣಿಕೆ ಎಂದು ಸ್ವೀಕರಿಸೆಂದು ನನಗೆ ಆಜ್ಞಾಪಿಸಿದರು. ಎರಡೂ ಆಜ್ಞೆಗಳಿಗೆ ವಿಧೇಯನಾದೆ, ಭಗವಂತನ ಆಜ್ಞೆಯಾದಾಗ ಕೊಲೆ, ಸುಲಿಗೆ ಮಾಡಿದೆ, ಏಕೆಂದರೆ ಅದನ್ನೇ ಅವನು ಸಾಧನವೆಂದು ಸ್ವೀಕರಿಸಲು ಸೂಚಿಸಿದ. ನಾನು ಮೋಸಗಾರನಾಗಿರಲಿಲ್ಲ, ಆದರೆ ನನಗಿದ್ದ ಸಂಪನ್ಮೂಲ ಹಾಗೂ ಸಹಾಯಕ ಜನರ ಕೊರತೆಯನ್ನು ನೀಗಿಸಲು ಕುಯುಕ್ತಿ ಹಾಗೂ ತಂತ್ರಗಳ ಸಹಾಯ ಪಡೆದೆ. ಬುದ್ಧಿಯಲ್ಲಿಯ ತೀಕ್ಷ್ಣತೆ ಮತ್ತು ಮಿದುಳಿನ ಶಕ್ತಿಗಳ ಮೂಲಕ ಭೌತಿಕ ಶಕ್ತಿಯ ಮೇಲೆ ಜಯ ಸಾಧಿಸಿದೆ. ಯುದ್ಧದಲ್ಲಿ ಹಾಗೂ ರಾಜಕಾರಣದಲ್ಲಿ ಕುಯುಕ್ತಿಯ ಉಪಯೋಗವನ್ನು ಒಪ್ಪಿಕೊಳ್ಳಲಾಗಿದೆ ಮತ್ತು ರಜಪೂತರ ದೀನಪಕ್ಷಪಾತದ ಸಾಚಾತನವನ್ನು ಯುರೋಪಿಯನ್ನರಾಗಲಿ ಇಲ್ಲವೆ ಏಶಿಯಾ ಮೂಲದವರಾಗಲಿ ತಮ್ಮದನ್ನಾಗಿ ಮಾಡಿಕೊಂಡಿಲ್ಲ.

**ಜಯಸಿಂಹ :** ಧರ್ಮ ಪರಮೋಚ್ಚವೆಂದು ನಾನು ಭಾವಿಸಿದ್ದೆ. ಅದನ್ನು ಕೈಬಿಡಲು ಭಗವಂತನ ವಾಣಿ ಕೂಡ ನನ್ನ ಮನವೊಲಿಸಲಿಲ್ಲ.

**ಶಿವಾಜಿ :** ನಾನು ಭಗವಂತನಿಗೆ ಎಲ್ಲವನ್ನೂ ಅರ್ಪಿಸಿದ್ದೆ, ಧರ್ಮವನ್ನೂ ಕೂಡ ನನಗಾಗಿ ಉಳಿಸಿಕೊಳ್ಳಲಿಲ್ಲ. ಭಗವಂತನ ಸಂಕಲ್ಪ ನನ್ನ ಧರ್ಮವಾಗಿತ್ತು, ಏಕೆಂದರೆ ಅವನೇ ನನ್ನ ಕಪ್ತಾನನಾಗಿದ್ದ, ನಾನು ಅವನ ಸೈನಿಕನಾಗಿದ್ದೆ. ಅದು ನನ್ನ ಸ್ವಾಮಿನಿಷ್ಠೆ. ಆ ಸ್ವಾಮಿನಿಷ್ಠೆ ಔರಂಗಜೇಬನಿಗಾಗಿ ಇರಲಿಲ್ಲ, ಆದರೆ ನನ್ನನ್ನು ಪೃಥ್ವಿಯ ಮೇಲೆ ಕಳಿಸಿಕೊಟ್ಟ ಭಗವಂತನಿಗಾಗಿತ್ತು.

**ಜಯಸಿಂಹ :** ಭಗವಂತನೇ ನಮ್ಮೆಲ್ಲರನ್ನು ಬೇರೆ, ಬೇರೆ ಉದ್ದೇಶಗಳಿಗಾಗಿ ಪೃಥ್ವಿಯ ಮೇಲೆ ಕಳಿಸುತ್ತಾನೆ ಮತ್ತು ಆ ಉದ್ದೇಶಕ್ಕನುಗುಣವಾಗಿ ಆದರ್ಶವನ್ನು ಚಾರಿತ್ರ್ಯವನ್ನು ಎರಕಕ್ಕೆ ಒಳಪಡಿಸುತ್ತಾನೆ. ಮೊಗಲ ರಾಜನ ಪತನವಾಯಿತೆಂದು ನನಗೆ ದುಃಖವಾಗಿಲ್ಲ. ಅವನು ಅದನ್ನು ಉಳಿಸಿಕೊಳ್ಳಲು ಯೋಗ್ಯನಾಗಿದ್ದರೆ ಉಳಿಸಿಕೊಳ್ಳುತ್ತಿದ್ದ, ಆದರೆ ಅವನು ಯೋಗ್ಯನಾಗಿರದೆ ಇದ್ದಾಗಲೂ ಕೂಡ ನನ್ನ ನಂಬಿಕೆಯನ್ನು, ಸೇವಾಭಾವವನ್ನು, ಸ್ವಾಮಿನಿಷ್ಠೆಯನ್ನು ಉಳಿಸಿಕೊಂಡೆ. ನನ್ನ ಸಾರ್ವಭೌಮನ ಸಂಕಲ್ಪ ಕುರಿತು ಚರ್ಚೆ ಮಾಡುವುದು ನನಗೆ ಸೇರಿದ ವಿಷಯವಲ್ಲ. ಅವನನ್ನು ಸಾರ್ವಭೌಮನನ್ನಾಗಿ ನೇಮಿಸಿದ ಭಗವಂತ ಅವನನ್ನು

ತೀರ್ಮಾನಕ್ಕೊಳಪಡಿಸಬೇಕು, ಅದು ನನ್ನ ಕಾರ್ಯವ್ಯಾಪ್ತಿಗೆ ಸೇರಿದುದಾಗಿರಲಿಲ್ಲ.

**ಶಿವಾಜಿ :** ಬಂಡಾಯವೇಳುವ ಮತ್ತು ಅನ್ಯಾಯದ ಅಧಿಕಾರವನ್ನು ಮೌನದೊಪ್ಪಿಗೆಯಿಂದ ಮುಂದುವರಿಸಿಕೊಂಡು ಹೋಗುವುದನ್ನು ತಿರಸ್ಕರಿಸುವ ಮನುಷ್ಯನನ್ನು ಭಗವಂತನೇ ನೇಮಿಸುತ್ತಾನೆ. ಭಗವಂತ ಯಾವಾಗಲೂ ಸಾಮರ್ಥ್ಯದ ಬದಿಗಿರು–ವುದಿಲ್ಲ. ಕೆಲವೊಮ್ಮೆ ಮುಕ್ತಗೊಳಿಸುವವನಾಗಿ ಪ್ರಕಟನಾಗುತ್ತಾನೆ.

**ಜಯಸಿಂಹ :** ತಾನು ವಚನಕೊಟ್ಟ ಹಾಗೆ ಭಗವಂತನೇ ಸ್ವತಃ ಕೆಳಗಿಳಿದು ಬರಲಿ, ಆಗ ಮಾತ್ರ ಬಂಡಾಯವೇಳುವುದಕ್ಕೆ ಸಮರ್ಥನೆ ಸಿಗುತ್ತದೆ.

**ಶಿವಾಜಿ :** ಆದರೆ ಅವನು ಈಗಾಗಲೆ ನಮ್ಮೆಲ್ಲರ ಹೃದಯಗಳಲ್ಲಿರುವುದರಿಂದ, ಎಲ್ಲಿಂದ ಕೆಳಗಿಳಿದು ಬರಬೇಕು? ನಾನು ಅವನನ್ನು ಅಲ್ಲಿ ನೋಡಿದೆ, ಅದರಿಂದಾಗಿ ನನ್ನ ಮಣಿಹವನ್ನು ಪೂರ್ತಿಗೊಳಿಸುವುದಕ್ಕೆ ನಾನು ಸಾಕಷ್ಟು ಬಲಶಾಲಿಯಾದೆ.

**ಜಯಸಿಂಹ :** ನಿನ್ನ ಕಾರ್ಯದ ಮೇಲೆ ಭಗವಂತನ ಅಧಿಕಾರ ವಾಗ್ದಾನ ಮಾಡಿದ ಮುದ್ರೆಯಲ್ಲಿದೆ ?

**ಶಿವಾಜಿ :** ಸಾಮ್ರಾಜ್ಯವೊಂದನ್ನು ನಾನು ಒಳಗೊಳಗೆ ಹಾಳುಮಾಡಿದೆ ಮತ್ತು ಅದರ ಪುನರ್ನಿರ್ಮಾಣವಾಗಿಲ್ಲ. ನಾನು ದೇಶವೊಂದನ್ನು ಸೃಷ್ಟಿಸಿದೆ, ಅದಿನ್ನೂ ನಾಶವಾಗಿ ಹೋಗಿಲ್ಲ.

**– ಶ್ರೀ ಅರವಿಂದರು**

*



## ವಾರ್ತಾಪತ್ರ

### ಶ್ರೀ ಅರವಿಂದೋ ಸೊಸೈಟಿ ಬ್ರ್ಯಾಂಚ್, ಧಾರವಾಡ

ದಿನಾಂಕ ಡಿಸೆಂಬರ 4, 2011 ರಂದು ಶ್ರೀ ರಜನೀಕಾಂತ, ಕಾರ್ಯದರ್ಶಿ, ಶ್ರೀ ಅರವಿಂದೋ ಸೊಸೈಟಿ, ಅಲಸೂರು ಬ್ರ್ಯಾಂಚ್, ಬೆಂಗಳೂರು ಶ್ರೀ ಅರವಿಂದೊ ಸೊಸೈಟಿ ಬ್ರ್ಯಾಂಚ್ ಧಾರವಾಡ ನಡೆಸಿಕೊಂಡು ಬರುತ್ತಿರುವ ಶ್ರೀ ಅರವಿಂದೋ ಶಾಲೆಯ ಆವರಣದಲ್ಲಿ ಶ್ರೀ ಅರವಿಂದರ ಮಹಾಕಾವ್ಯ 'ಸಾವಿತ್ರಿ' ಕುರಿತು ಸಾಯಂಕಾಲ 5 ಗಂಟೆಗೆ ಸುದೀರ್ಘ ಭಾಷಣ ಮಾಡಿದರು. ಆ ಕಾವ್ಯದ ಮೊದಲನೆಯ ಅಧ್ಯಾಯದಿಂದ ಪ್ರಾರಂಭ ಮಾಡಿ ಕೊನೆಯ ಅಧ್ಯಾಯದವರೆಗೆ ಬರುವ ಮುಖ್ಯಾಂಶಗಳನ್ನು ಕಾವ್ಯದ ಮೂಲರೂಪದಲ್ಲಿ ಉದ್ಧರಿಸಿ, ಅಲ್ಲಲ್ಲಿ ಸರಿಯಾದ ಒತ್ತು ನೀಡಿ ಪರಿಚಯ ಮಾಡಿಕೊಟ್ಟರು. ಈ ಸಭೆಗೆ ಈ ಬ್ರ್ಯಾಂಚಿನ ಕಾರ್ಯಾಧ್ಯಕ್ಷ ಶ್ರೀ ವಿ.ಜಿ. ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಡಾ. (ಶ್ರೀಮತಿ) ಸುಶೀಲಾ ಬಳುಂಡಗಿ ಅತಿಥಿಗಳ ಪರಿಚಯ ಮಾಡಿಕೊಟ್ಟರು. ಡಾ. ಕೆ.ಎಸ್. ಆಮೂರ ಪ್ರಾಸ್ತಾವಿಕ ಮಾತುಗಳನ್ನು ಹೇಳುತ್ತ ಶ್ರೀ ಅರವಿಂದರ ಬಗ್ಗೆ ಸಂಕ್ಷಿಪ್ತ ಪರಿಚಯ ಮಾಡಿಕೊಟ್ಟರು. ಕಾರ್ಯದರ್ಶಿ ಶ್ರೀ ಹರೀಶ ಆಮೂರ ವಂದನಾರ್ಪಣೆ ಮಾಡಿದರು. ಸಭೆಗೆ ಧಾರವಾಡ, ಹುಬ್ಬಳ್ಳಿ ಕೇಂದ್ರಗಳ ಸದಸ್ಯರಲ್ಲದೆ ಇತರ ಗಣ್ಯವ್ಯಕ್ತಿಗಳು ಆಗಮಿಸಿದ್ದರು.

### ಶ್ರೀ ಅರವಿಂದೋ ಸಂಕೀರ್ಣ,

ಜೆ.ಪಿ. ನಗರ 1ನೇ ಹಂತ, ಬೆಂಗಳೂರು–78.

ದಿನಾಂಕ 5–12–2011ರ ಸೋಮವಾರದಂದು ಶ್ರೀ ಅರವಿಂದರ ಮಹಾ–ಸಮಾಧಿಯ ದಿನವನ್ನಾಗಿ ಆಚರಿಸಲಾಯಿತು. ತತ್ಸಂಬಂಧ ಬೆಳಿಗ್ಗೆ 7.00 ರಿಂದ 7.30ರ ವರೆಗೆ ಸಾಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರವನ್ನು ವಿತರಿಸಲಾಯಿತು. ಶ್ರೀಯುತ ಎಸ್.ಎಸ್. ಲಹರಿಯವರು "An Approach To - The Symbol Dawn" ವಿಷಯದ ಬಗ್ಗೆ ಪವರ್ ಪಾಯಿಂಟ್ ಪ್ರಸೆಂಟೇಷನ್ ಮೂಲಕ ಸವಿಸ್ತಾರವಾಗಿ ವಿವರಿಸಿದರು. ನಂತರ ಗುರುಬಂಧುಗಳ ಪ್ರಶ್ನೆಗಳಿಗೆ ಸಮರ್ಪಕವಾಗಿ ಉತ್ತರಿಸಿದರು. ಕಾರ್ಯಕ್ರಮಕ್ಕೆ ಅನೇಕ ಗುರುಬಂಧುಗಳು, ಹಾಗೂ ಇತರರು ಆಗಮಿಸಿ ಪ್ರಯೋಜನವನ್ನು ಪಡೆದುಕೊಂಡರು.

ದಿನಾಂಕ 10–12–2011 ರಂದು ಮೀರಾಂಬಿಕ ಸ್ಕೂಲ್ ಫಾರ್ ನ್ಯೂ ಏಜ್ ನರ್ಸರಿ ವಿಭಾಗದ ವಾರ್ಷಿಕೋತ್ಸವವನ್ನು ಶಾಲೆಯ ಶ್ರೀರಂಗ ವೇದಿಕೆಯಲ್ಲಿ ಆಚರಿಸಲಾಯಿತು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಸಂಸ್ಥೆಯ ಆಡಳಿತಾಧಿಕಾರಿ ಶ್ರೀಮತಿ ಪ್ರತಿಭಾ ಸಬ್ನೀಸ್ ಆಗಮಿಸಿದರು. ಜ್ಯೋತಿ ಬೆಳಗುವುದರೊಂದಿಗೆ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಎಳೆಯ ಮಕ್ಕಳ ಪ್ರತಿಭೆಯನ್ನು ಹೊರ ತರುವಲ್ಲಿ ಶ್ರಮವಹಿಸಿದ ನರ್ಸರಿ ಶಿಕ್ಷಕ ವೃಂದದವರು ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ಶ್ರೀಮತಿ ಚಿತ್ರರಾಮಚಂದ್ರನ್ ಕಾರ್ಯಕ್ರಮವನ್ನು ನಿರೂಪಿಸಿದರು. ವಂದೇ ಮಾತರಂ ಗೀತೆಯೊಂದಿಗೆ ಕಾರ್ಯಕ್ರಮ ಸಮಾಪ್ತಿ–ಯಾಯಿತು.

ದಿನಾಂಕ 29–12–2011 ರಂದು ಸಂಜೆ 4.00 ರಿಂದ 5.30ರ ವರೆಗೆ ಶ್ರೀ ಅರವಿಂದೋ ಸಂಕೀರ್ಣದಲ್ಲಿ **"ಆರೋಗ್ಯದಲ್ಲಿ ಜಾಗೃತಿ" ಕಾರ್ಯಕ್ರಮ–ದಡಿಯಲ್ಲಿ "The Role of Nutrition in Health"** ಎಂಬ ವಿಷಯದ ಬಗ್ಗೆ ಡಾ॥ ವೀಣಾ ರವರು ಉಪನ್ಯಾಸವನ್ನು ನೀಡಿದರು. ಕಾರ್ಯಕ್ರಮಕ್ಕೆ ಸಂಕೀರ್ಣದ ಸಿಬ್ಬಂದಿ ವರ್ಗದವರು ಹಾಗೂ ಸಾರ್ವಜನಿಕರು ಹಾಜರಿದ್ದರು.

-oo0oo-



# REVISION OF THE SOCIETY'S MEMBERSHIP FEES IN INDIA

## With effect from 1st April, 2009

| Sl.No. | Membership Category | Amount in Rs. |
|---|---|---|
| 1. | Member with Magazine | |
| | For One Year | 150 |
| | For Three Years | 440 |
| | For Five Years | 730 |
| 2. | Donor Member | |
| | For 10 Years | 3000 |
| 3. | Contributing Member | |
| | For One Year | 300 |
| 4. | Contributing Donor Memeber | |
| | For 15 Years | 10,000 |